# ಜನತಾವಾಣಿ


ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಡಿಸೆಂಬರ್ 22, 2020

ಸಂಪುಟ : 47 ಸಂಚಿಕೆ : 232 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com


## 'ಸಾಮಾನ್ಯ'ದಲ್ಲಿ ಎಲ್ಲ ಮೀಸಲಾತಿ 'ಅರ್ಹ'

**ಅರ್ಹತೆ ಹೊಂದಿದ ಎಲ್ಲ ಮೀಸಲಾತಿ ವರ್ಗದವರನ್ನು ಸಾಮಾನ್ಯರ ವಿಭಾಗಕ್ಕೆ ಸೇರಿಸಲು ಸುಪ್ರೀಂ ತೀರ್ಪು**

ನವದೆಹಲಿ, ಡಿ. 21 – ಸರ್ಕಾರಿ ಉದ್ಯೋಗಗಳಲ್ಲಿ ಸಾಮಾನ್ಯ ವರ್ಗದ ಸ್ಥಾನಗಳನ್ನು ಇತರೆ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಸೇರಿದಂತೆ ಎಲ್ಲ ವರ್ಗದವರೂ ಪಡೆಯಬಹುದು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ನ್ಯಾಯಮೂರ್ತಿಗಳಾದ ಯು.ಯು. ಲಲಿತ್, ರವೀಂದ್ರ ಭಟ್ ಹಾಗೂ ಹೃಶಿಕೇಶ್ ರಾಯ್ ಅವರನ್ನು ಒಳಗೊಂಡ ಪೀಠ ಈ ತೀರ್ಪು ನೀಡಿದೆ. ಅರ್ಹತೆ ಹೊಂದಿರುವ ಮೀಸಲು ವರ್ಗದ ಅಭ್ಯರ್ಥಿಗಳು ಸಾಮಾನ್ಯ ವರ್ಗದಲ್ಲಿ ಸ್ಥಾನ ಪಡೆಯಬಾರದು ಎಂದರೆ ಅದು ಕೋಮು ಮೀಸಲಾತಿಯಾಗುತ್ತದೆ ಎಂದು ಪೀಠ ಹೇಳಿದೆ.

ಯಾವುದೇ ಮೀಸಲಾತಿ ವರ್ಗಕ್ಕೆ ಸೇರಿದವರು ಸಾಮಾನ್ಯ ವರ್ಗದಲ್ಲಿ ಸ್ಥಾನಗಳನ್ನು ಪಡೆಯಬಹುದು ಎಂಬುದು ಈಗಾಗಲೇ ನಿರ್ಧರಿತವಾಗಿರುವ ಅಂಶವಾಗಿದೆ. ಮೀಸಲು ವರ್ಗದಲ್ಲಿರುವ ಅಭ್ಯರ್ಥಿ ತನ್ನ ಅರ್ಹತೆಯಿಂದಲೇ ಆಯ್ಕೆಯಾಗುವ ಸಾಮರ್ಥ್ಯ ಹೊಂದಿದ್ದರೆ, ಮೀಸಲಾತಿ ಕೋಟಾದಲ್ಲಿ ಸ್ಥಾನ ನೀಡುವ ಬದಲು ಸಾಮಾನ್ಯ ವರ್ಗದಲ್ಲಿಯೇ ಸ್ಥಾನ ಕಲ್ಪಿಸಬೇಕು ಎಂದು ನ್ಯಾಯಮೂರ್ತಿ ಲಲಿತ್ ಹಾಗೂ ನ್ಯಾಯಮೂರ್ತಿ ರಾಯ್ ತೀರ್ಪಿನಲ್ಲಿ ಹೇಳಿದ್ದಾರೆ.

ಪ್ರತ್ಯೇಕ ತೀರ್ಪು ನೀಡಿರುವ ನ್ಯಾಯಮೂರ್ತಿ ಭಟ್, ಸಾಮಾನ್ಯ ವರ್ಗ ಎಂಬುದು ಮೀಸಲಲ್ಲ. ಇದು ಎಲ್ಲ ಮಹಿಳೆಯ ಹಾಗೂ ಪುರುಷರಿಗೆ ಸಮಾನವಾಗಿ ಲಭ್ಯವಿರುವ ಸ್ಥಾನಗಳು. ಅರ್ಹತೆಯೊಂದೇ ಇಲ್ಲಿರುವ ಮಾನದಂಡ ಎಂದು ಹೇಳಿದ್ದಾರೆ.

ಇತರೆ ಹಿಂದುಳಿದ ವರ್ಗದ ಮಹಿಳೆ ಹಾಗೂ ಪರಿಶಿಷ್ಟ ಜಾತಿ ಮಹಿಳೆ ವರ್ಗದ ಅಭ್ಯರ್ಥಿಗಳು 2013ರಲ್ಲಿ ಉತ್ತರ ಪ್ರದೇಶದಲ್ಲಿ ಪೇದೆಗಳ ಹುದ್ದೆಗೆ ಆಯ್ಕೆಯಾಗಿದ್ದರು. ಅವರು ದಾಖಲಿಸಿದ ಅರ್ಜಿಯ ವಿಚಾರಣೆ ನಡೆಸುವಾಗ ಸುಪ್ರೀಂ ಕೋರ್ಟ್, ಸಾಮಾನ್ಯ ವರ್ಗ ಎಲ್ಲರಿಗೂ ಸೇರಿದ್ದು ಎಂದು ತಿಳಿಸಿದೆ.

# ಜಿಲ್ಲೆಗೆ ಎರಡು ವಿದ್ಯುತ್ ಘಟಕ

## ಜಗಳೂರು ತಾ॥ ನಲ್ಲಿ 4,200 ಕೋಟಿ ರೂ. ವೆಚ್ಚದಲ್ಲಿ ಸ್ಥಾಪನೆ



**ಮುಖ್ಯಮಂತ್ರಿ ನೇತೃತ್ವದ ಉನ್ನತ ಸಮಿತಿ ಸಭೆಯಲ್ಲಿ ಹೈಬ್ರಿಡ್ ಪವನ, ಸೌರ ವಿದ್ಯುತ್ ಘಟಕಗಳ ಬೃಹತ್ ಯೋಜನೆಗಳಿಗೆ ಒಪ್ಪಿಗೆ**

ಬೆಂಗಳೂರು, ಡಿ. 21 – ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನಲ್ಲಿ 4,200 ಕೋಟಿ ರೂ.ಗಳಿಗೂ ಹೆಚ್ಚು ಮೊತ್ತದ ಬೃಹತ್ ವಿದ್ಯುತ್ ಉತ್ಪಾದನಾ ಘಟಕಗಳ ಸ್ಥಾಪನೆಗೆ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ನೇತೃತ್ವದ ಉನ್ನತ ಸಮಿತಿ ಒಪ್ಪಿಗೆ ನೀಡಿದೆ.

26,659 ಕೋಟಿ ರೂ. ಮೌಲ್ಯದ ಐದು ಹೂಡಿಕೆ ಪ್ರಸ್ತಾವನೆಗಳಿಗೆ ಮುಖ್ಯಮಂತ್ರಿಗಳ ನೇತೃತ್ವದ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯ 55ನೇ ಸಭೆಯಲ್ಲಿ ಯೋಜನೆಗಳಿಗೆ ಒಪ್ಪಿಗೆ ನೀಡಲಾಗಿದೆ. ಇದರಲ್ಲಿ ಜಗಳೂರು ತಾಲ್ಲೂಕಿನ ಎರಡು ಯೋಜನೆಗಳು ಸೇರಿವೆ.

ಮಿರಾಕ್ಯುಲಮ್ ಗ್ರೀನ್ ಪವರ್ ಕಂಪನಿಯು ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನಲ್ಲಿ 110 ಮೆಗಾವ್ಯಾಟ್ ಹೈಬ್ರಿಡ್ ಪವನ, ಸೌರ ವಿದ್ಯುತ್ ಘಟಕ ಉತ್ಪಾದಿಸಲು ಅನುಮತಿ ನೀಡಲಾಗಿದೆ. ಇದರಿಂದ 2,820 ಜನರಿಗೆ ಉದ್ಯೋಗ ಸಿಗುವ ನಿರೀಕ್ಷೆ ಇದೆ.

ಜಗಳೂರು ತಾಲ್ಲೂಕಿನಲ್ಲೇ 1,710 ಎಕರೆ ಪ್ರದೇಶದಲ್ಲಿ 2,950 ಕೋಟಿ ರೂ. ಹೂಡಿಕೆ ಮಾಡುವ ಸನಾಲಿ ಪವರ್ ಪ್ರೈವೇಟ್ ಲಿಮಿಟೆಡ್‌ನ ಹೈಬ್ರಿಡ್ ಪವನ, ಸೌರ ವಿದ್ಯುತ್ ಘಟಕಕ್ಕೂ ಒಪ್ಪಿಗೆ ನೀಡಲಾಗಿದೆ. ಇದು 5,640 ಜನರಿಗೆ ಉದ್ಯೋಗ ನೀಡುವ ನಿರೀಕ್ಷೆ ಇದೆ. ಈ ಎರಡೂ ಕಂಪನಿಗಳು ಸ್ಥಾಪನೆಯಾದರೆ 8 ಸಾವಿರಕ್ಕೂ ಹೆಚ್ಚು (2ನೇ ಪುಟಕ್ಕೆ)

# ಇಂದು ಪಂಚಾಯ್ತಿ ಚುನಾವಣೆ

## ಮೊದಲ ಹಂತದಲ್ಲಿ 3 ತಾಲ್ಲೂಕುಗಳ ಅಭ್ಯರ್ಥಿಗಳ ಹಣೆಬರಹ ನಿರ್ಧಾರ

ದಾವಣಗೆರೆ, ಡಿ. 21 - ಜಿಲ್ಲೆಯಲ್ಲಿ ನಾಳೆ ನಡೆಯಲಿರುವ ಮೊದಲ ಹಂತದ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ 3 ತಾಲ್ಲೂಕುಗಳ 88 ಗ್ರಾಮ ಪಂಚಾಯ್ತಿಗಳಿಗೆ ಚುನಾವಣೆ ನಡೆಯಲಿದೆ.

ದಾವಣಗೆರೆಯ 38, ಹೊನ್ನಾಳಿಯ 28 ಹಾಗೂ ಜಗಳೂರಿನ 22 ಗ್ರಾಮ ಪಂಚಾಯ್ತಿಗಳಿಗೆ ಚುನಾವಣೆ ನಡೆಸಲು ಜಿಲ್ಲಾಡಳಿತ ಸಂಪೂರ್ಣ ಸಿದ್ಧತೆ ಕೈಗೊಂಡಿದೆ.

ಬೆಳಿಗ್ಗೆ 7ರಿಂದ ಸಂಜೆ 5ರವರೆಗೆ ಮತದಾನ ನಡೆಯಲಿದ್ದು, 3.78 ಲಕ್ಷ ಮತದಾರರು 1,087 ಸ್ಥಾನಗಳಿಗಾಗಿ ಮತದಾನ ಮಾಡಲಿದ್ದಾರೆ.

ಚುನಾವಣೆಗಾಗಿ ದಾವಣಗೆರೆಯಲ್ಲಿ 275 ಮತಗಟ್ಟೆಗಳಿದ್ದು, ಇವುಗಳಲ್ಲಿ 37 ಸೂಕ್ಷ್ಮ ಹಾಗೂ 18 ಅತಿ ಸೂಕ್ಷ್ಮವಾಗಿವೆ. ಹೊನ್ನಾಳಿಯಲ್ಲಿ 153 ಮತಗಟ್ಟೆಗಳಿದ್ದು, ಇವುಗಳಲ್ಲಿ 17 ಸೂಕ್ಷ್ಮ ಹಾಗೂ 32 ಅತಿ ಸೂಕ್ಷ್ಮವಾಗಿವೆ. ಜಗಳೂರಿನಲ್ಲಿ 219 ಮತಗಟ್ಟೆಗಳಿದ್ದು, 45 ಸೂಕ್ಷ್ಮ ಹಾಗೂ 16 ಅತಿ ಸೂಕ್ಷ್ಮವಾಗಿವೆ.

ಈ ಮೂರು ತಾಲ್ಲೂಕುಗಳ 211 ಸ್ಥಾನಗಳಿಗೆ ಈಗಾಗಲೇ ಅವಿರೋಧವಾಗಿ ಆಯ್ಕೆಯಾಗಿದೆ. ಮೂರು ಸ್ಥಾನಗಳಿಗೆ ಯಾರೂ ನಾಮಪತ್ರ ಸಲ್ಲಿಸಿಲ್ಲ. ಹೀಗಾಗಿ ಒಟ್ಟು 1,301 ಸ್ಥಾನಗಳ ಪೈಕಿ 1,087ಕ್ಕೆ ಮಾತ್ರ ಚುನಾವಣೆ ನಡೆಯಲಿದೆ. ದಾವಣಗೆರೆಯ 499, ಜಗಳೂರಿನ 297 ಹಾಗೂ ಹೊನ್ನಾಳಿಯ (3ನೇ ಪುಟಕ್ಕೆ)

### ಬಿಗಿ ಬಂದೋಬಸ್ತ್

**ದಾವಣಗೆರೆ, ಡಿ.21- ಇಂದು ನಡೆಯಲಿರುವ ಗ್ರಾಮ ಪಂಚಾಯ್ತಿ ಚುನಾವಣೆ ಅಂಗವಾಗಿ ದಾವಣಗೆರೆ, ಜಗಳೂರು ಹಾಗೂ ಹೊನ್ನಾಳಿ ತಾಲ್ಲೂಕಿನಲ್ಲಿ ಸೂಕ್ತ ಪೊಲೀಸ್ ಬಂದೋ ಬಸ್ತ್ ಏರ್ಪಡಿಸಲಾಗಿದೆ. ಪೊಲೀಸ್ ಅಧೀಕ್ಷಕರ ನೇತೃತ್ವದಲ್ಲಿ ಹೆಚ್ಚುವರಿ ಎಸ್ಪಿ, ಡಿವೈಎಸ್ಪಿ, 10 ಪಿಐ, 32 ಪಿಎಸ್ಐ, 50 ಎಸ್.ಐ., 595 ಪಿಸಿ, 181 ಹೋಂ ಗಾರ್ಡ್ಸ್, 3 ಕೆಎಸ್ಆರ್‌ಪಿ ತುಕಡಿ ಹಾಗೂ 7 ಡಿಎಆರ್ ತುಕಡಿ ನಿಯೋಜಿಸಲಾಗಿದೆ.**

# ಶಾಲಾರಂಭಕ್ಕೆ ಮಾರ್ಗಸೂಚಿ

## ಶಿಕ್ಷಕರಷ್ಟೇ ಅಲ್ಲದೇ ಪೋಷಕರು, ಸಮುದಾಯದವರಿಗೂ ಇದೆ ಹೊಣೆ

ದಾವಣಗೆರೆ, ಡಿ. 21 - ಕೊರೊನಾ ಹಿನ್ನೆಲೆಯಲ್ಲಿ ಮುಚ್ಚಲಾಗಿದ್ದ ಶಾಲೆಗಳನ್ನು ಜನವರಿ 1ರಿಂದ ಪುನರಾರಂಭಿಸಲು ಹಾಗೂ ವಿದ್ಯಾಗಮಕ್ಕೆ ಮರು ಚಾಲನೆ ನೀಡಲು ರಾಜ್ಯ ಸರ್ಕಾರ ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಶಾಲಾ ಮುಖ್ಯೋಪಾಧ್ಯಾಯರು, ಶಿಕ್ಷಕರಷ್ಟೇ ಅಲ್ಲದೇ ಮಕ್ಕಳು, ಪೋಷಕರು ಹಾಗೂ ಸಮುದಾಯದ ಜನರಿಗೂ ಕೊರೊನಾ ಮುನ್ನೆಚ್ಚರಿಕಾ ಹೊಣೆಗಾರಿಕೆಯನ್ನು ವಹಿಸಲಾಗಿದೆ.

ಶಾಲಾ ಪ್ರಾರಂಭಕ್ಕೆ ಮುಂಚೆ ಕೊಠಡಿ, ಉಪಕರಣ, ಆವರಣ, ಲ್ಯಾಬ್, ಗ್ರಂಥಾಲಯ, ಅಕ್ಷರ ದಾಸೋಹ ಅಡುಗೆ ಮನೆ ಇತ್ಯಾದಿಗಳನ್ನು ಸ್ವಚ್ಛಗೊಳಿಸಿ ಸ್ಯಾನಿಟೈಜ್ ಮಾಡಲು ತಿಳಿಸಲಾಗಿದೆ. ನೀರಿನ ಟ್ಯಾಂಕ್‌ಗಳಿಂದ ಹಿಡಿದು ಶೌಚಾಲಯದವರೆಗೆ ಸ್ವಚ್ಛತಾ ಕಾರ್ಯಗಳನ್ನು ನಡೆಸಬೇಕು. ಶಾಲೆಗಳಲ್ಲಿ (3ನೇ ಪುಟಕ್ಕೆ)

# ಸೆಸ್ ಹೆಚ್ಚಳದ ವಿರುದ್ಧ ರ್‍ಯಾಲಿ

ದಾವಣಗೆರೆ, ಡಿ.21- ಎಪಿಎಂಸಿ ಸೆಸ್ ಹೆಚ್ಚಿಸಿರುವ ರಾಜ್ಯ ಸರ್ಕಾರದ ಕ್ರಮ ಖಂಡಿಸಿ ದಲ್ಲಾಲರ ಸಂಘ, ಕರ್ನಾಟಕ ಮೆಕ್ಕೆಜೋಳ ವರ್ತಕರ ಸಂಘ ಹಾಗೂ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆ ವತಿಯಿಂದ ನಗರದಲ್ಲಿಂದು ಪ್ರತಿಭಟನೆ ನಡೆಸಲಾಯಿತು.

ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಜಮಾಯಿಸಿದ್ದ ದಲ್ಲಾಲರು ಮತ್ತು ವರ್ತಕರು ರಾಜ್ಯ ಸರ್ಕಾರವು ಅವೈಜ್ಞಾನಿಕವಾಗಿ ಎಪಿಎಂಸಿ ಸೆಸ್ ಹೆಚ್ಚಿಸಿದೆ ಎಂದು ಆರೋಪಿಸಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ನಿಯೋಗದ ಮೂಲಕ (3ನೇ ಪುಟಕ್ಕೆ)

## ಜಿ.ಎಸ್. ಪುಷ್ಪಾ ನಿಧನ



ದಾವಣಗೆರೆ ಆನೆಕೊಂಡ ಗ್ರಾಮದ ಗೌಡ್ರು ನಾಗಪ್ಪ ಅವರ ಮಗ ಗೌಡ್ರು ಸಿದ್ದೇಶ್ (ಸ್ವಾತಿ ಟ್ರಾನ್ಸ್‌ಪೋರ್ಟ್ ಮಾಲೀಕರು) ಅವರ ಧರ್ಮಪತ್ನಿ


**ಶ್ರೀಮತಿ ಜಿ.ಎಸ್. ಪುಷ್ಪಾ (50)**

ಇವರು ದಿನಾಂಕ 21.12.2020 ರ ಸೋಮವಾರ ಸಂಜೆ 7.45 ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.12.2020 ರಂದು ಮಂಗಳವಾರ ಬೆಳಿಗ್ಗೆ 11.30ಕ್ಕೆ ದಾವಣಗೆರೆ ಬೇತೂರು ರಸ್ತೆಯಲ್ಲಿರುವ ಮೃತರ ತೋಟದಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ
ಆನೆಕೊಂಡ ಗೌಡ್ರು, ವಂಶಸ್ಥರು ಹಾಗೂ ಬಂಧು-ಬಳಗ
ಮೊ: 91418 50455, 94482 33270, 90607 99555







**ಬೇಕಾಗಿದ್ದಾರೆ**
ಟ್ಯಾಲಿಯಲ್ಲಿ ಅನುಭವವಿರುವ ಅಕೌಂಟೆಂಟ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ :
**ಬೋಂದಾಡೆ ಎಂಟರ್‌ಪ್ರೈಸಸ್** (ಸ್ಟೀಲ್ ಶಾಪ್)
#1334/1, ಹದಡಿ ರಸ್ತೆ, ದಾವಣಗೆರೆ-05.
ಮೊ. : 98865 08965

**ತಕ್ಷಣ ಬೇಕಾಗಿದ್ದಾರೆ**
ನಿರ್ವೀನ್ಸ್ ಕೆಫೆಗೆ ದ್ವಿತೀಯ ಪಿಯುಸಿ ಫಾಸ್/ಫೇಲ್ ಆಗಿರುವ 18 ರಿಂದ 25 ವರ್ಷದೊಳಗಿನ ಪುರುಷ/ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ. 93804 69079

**ಕರ್ನಾಟಕ ಗೃಹಮಂಡಳಿಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
50x80 South, 50x80 West, 50x80 East, 40x50, 40x50 North ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟ್‌ಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ 30x45 ಪೂರ್ವ, 30x50 ದಕ್ಷಿಣ, ಹೊಸ ಕುಂದವಾಡದ ಹತ್ತಿರ ಕನಕ ಬಡಾವಣೆಯಲ್ಲಿ 30x50 ಪೂರ್ವ
ಶಾಮನೂರು ಧನ್ಯಕುಮಾರ್
97415 62589
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟ್‌ಗಳು ಮನೆಗಳು ಮಾರಾಟಕ್ಕಿವೆ**
30x50 South ಸೈಟ್ ನವೋದಯ ಸ್ಕೂಲ್ ಹತ್ತಿರ, 40x60 South ಸೈಟ್ ನಿಜಲಿಂಗಪ್ಪ ಬಡಾವಣೆಯಲ್ಲಿ, 40x60 North ಮನೆ 3ಬೆಡ್‌ರೂಂ ಮನೆ ಕುವೆಂಪು ಬಡಾವಣೆಯಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟ್‌ಗಳು ಮಾರಾಟಕ್ಕಿವೆ**
ಮನೆಗಳು ಬಾಡಿಗೆಗೆ/ಲೀಜಿಗೆ ಇವೆ
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x52 ಪೂರ್ವ ದಿಕ್ಕಿನ 40 ಅಡ್ಡ ರಸ್ತೆಗೆ, ಶಿವ ಪಾರ್ವತಿ ಬಡಾವಣೆಯಲ್ಲಿ 30x44 ಪೂರ್ವ, 30x56 ಪೂರ್ವ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715
ಶಾಮನೂರು ನಾಗರಾಜ್
98448 83303

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ 30×40 ಪಶ್ಚಿಮ ಕುವೆಂಪು ಬಡಾವಣೆ ಮನೆಗಳು 20×48 ಪೂರ್ವ, ಆರ್.ಟಿ.ಓ. ರಿಂಗ್ ರೋಡ್ ಸರ್ಕಲ್ ಹತ್ತಿರ 40×60 ಮನೆ, ಪೂರ್ವ ದಿಕ್ಕು, ನಿಜಲಿಂಗಪ್ಪ ಬಡಾವಣೆ ಪಶ್ಚಿಮ-ಪೂರ್ವ ದಿಕ್ಕಿನ ಮನೆಗಳು/ಸೈಟುಗಳು, ಕುವೆಂಪು ಬಡಾವಣೆ ಉತ್ತರ 40×60, ಪಶ್ಚಿಮ, ಸಿದ್ದವೀರಪ್ಪ ಬಡಾವಣೆ ಪಶ್ಚಿಮ, 30×50 ಪೂರ್ವ, ವಿನೋಬನಗರ, ರಿಂಗ್ ರೋಡ್ ಹತ್ತಿರ, 30×40 ಉತ್ತರ.
ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ
ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495

**ಬಿಲ್ಡಿಂಗ್ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ರೀ ಪೇಂಟಿಂಗ್**
ಹಳೆಯ ಮನೆಯನ್ನು ಹೊಸದಾಗಿ ಪೇಂಟಿಂಗ್ ಮಾಡಿಸಿ ಕೊಳ್ಳಿ, ಕಡಿಮೆ ದರದಲ್ಲಿ
72046 33302

**ಬೇಕಾಗಿದ್ದಾರೆ**
ಬೇಕರಿಯ ಅನುಭವವುಳ್ಳ ಕೌಂಟರ್ ಸೇಲ್ಸ್ ಮತ್ತು ಅಸಿಸ್ಟೆಂಟ್ ಹುಡುಗರು ಅಥವಾ ಹುಡುಗಿಯರು ಬೇಕಾಗಿದ್ದಾರೆ.
84317 30550

**ಹುಡುಗರು ಬೇಕಾಗಿದ್ದಾರೆ**
ಬಿಲ್ಡಿಂಗ್‌ನಲ್ಲಿ ಎಲೆಕ್ಟ್ರಿಕಲ್ ವೈರಿಂಗ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ದಿನಕ್ಕೆ ಸಂಬಳ ರೂ 250 ರಿಂದ 550 ರವರೆಗೆ ಸಂಪರ್ಕಿಸಿ:
63631 00191

**ಮನೆ ಲೀಸ್‌ಗೆ ಇದೆ**
ಬಾಲಾಜಿ ನಗರ (ಎಸ್.ಎಸ್. ಲೇಔಟ್), 2nd ಸ್ಟೇಜ್, 2 ಬೆಡ್‌ರೂಂ ಗ್ರೌಂಡ್ ಫ್ಲೋರ್ ಹಾಗೂ ಮೊದಲನೆ ಮಹಡಿಯಲ್ಲಿ 2 ಮನೆಗಳು ಲೀಸ್‌ಗೆ ಇವೆ. ಬೋರ್‌ವೆಲ್/ಮುನ್ಸಿಪಲ್ ನೀರು, ಸೋಲಾರ್ ವ್ಯವಸ್ಥೆ ಇದೆ. ಸಂಪರ್ಕಿಸಿ:
80506 21189

**ಮನೆ ಲೀಸ್‌ಗೆ ಇದೆ**
ಗ್ರೌಂಡ್ ಫ್ಲೋರ್, 3 BHK, #1691/53, ಸೈನಿಕ ಸದನ ತುಳಸಿ ಆಯುರ್ವೇದಿಕ್ ಆಸ್ಪತ್ರೆ ಹತ್ತಿರ, ಸರಸ್ವತಿ ನಗರ. ಮುನ್ಸಿಪಲ್/ಬೋರ್ ನೀರು ಸೋಲಾರ್ ಗ್ಯಾಸ್ ಗೀಸರ್ UPS ವ್ಯವಸ್ಥೆ ಇದೆ.
94483 39238
82774 31170

**Tele Calling**
ನಲ್ಲಿ ನುರಿತವಾಗಿ English ಮಾತನಾಡಲು ಬರುವ E-mail correspondence, (Insurance, Finance Company, ಮೊಬೈಲ್ ಕಂಪನಿಯಲ್ಲಿ Back-End ಕೆಲಸ ಮಾಡಿದ ಅನುಭವವಿರುವವರಿಗೆ ಆದ್ಯತೆ). Power Point presentation ಮಾಡಲು ಯುವತಿಯರು ಬೇಕಾಗಿದ್ದಾರೆ. Tally ಬಲ್ಲವರಿಗೆ ಆದ್ಯತೆ.
ಸಂಪರ್ಕಿಸಿ : 80882-10419

**ಸೈಟುಗಳು/ಹೊಲ ಮಾರಾಟಕ್ಕೆ**
ಬನಶಂಕರಿ ಲೇಔಟ್, ಜಯನಗರ, ಶಿವ-ಪಾರ್ವತಿ ಬಡಾವಣೆ
30x30, 30x50, 50x75, 40x60,
ಸೈಟ್‌ಗಳು, ಮನೆ ಮತ್ತು ಹೊಲ, ಬಂಗ್ಲೆ ಸೈಟುಗಳು, ಅಪಾರ್ಟ್‌ಮೆಂಟ್ ಸೈಟುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.
ಅಭಿಷೇಕ್ ಅಳ್ಳೇರ್, ಏಜೆಂಟ್
ಮೊ.97315 12365

**ಭೂಮಿಕ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
BIET ರೋಡ್ ಹೇಮಾವತಿ ಹಾಸ್ಟೆಲ್ ಹತ್ತಿರ, ದಾವಣಗೆರೆ.
www.bhoomikamatrimony.com
90080 55813

**ಚಾಲ್ತಿಯಲ್ಲಿರುವ ಪ್ರಾವಿಜನ್ ಸ್ಟೋರ್ ಮಾರಾಟಕ್ಕಿದೆ.**
99016 36693

**ರೂಂಗಳು ಬಾಡಿಗೆಗೆ ಇವೆ**
ಅಟ್ಯಾಚ್ ಬಾತ್ ರೂಂ ಸೌಕರ್ಯ ಇದೆ. ಸವಣೂರು ಬಾಬು ಆರ್ಕೇಡ್ ಲಾಯರ್ ರೋಡ್, ಪಿ.ಬಿ. ರೋಡ್ ಹತ್ತಿರ, ದಾವಣಗೆರೆ.
99002 60330

**WANTED**
Boy Candidate Requiered to Computer billing at Super Market. condidates with 2 years Experience must
contact : 99009 71888
Store at HKR circle, Nittuvalli

**ಬಾಡಿಗೆಗೆ/ಭೋಗ್ಯಕ್ಕೆ**
ದಾವಣಗೆರೆಯಲ್ಲಿ ಸರ್ಕಿಟ್ ಹೌಸ್, P.B. ರಸ್ತೆ ಹತ್ತಿರ ಗಾರ್ಡನ್ ಕೆಫೆ, ಪ್ರವಾಸಿ, ಟ್ರಾನ್ಸ್‌ಪೋರ್ಟ್ ಬುಕ್ಕಿಂಗ್‌ಗೆ, ಸೋಲಾರ್, ಪಾರ್ಕಿಂಗ್ ಸೌಲಭ್ಯದ ಎರಡು ಮಳಿಗೆಗಳು ತಕ್ಷಣ ದೊರೆಯುತ್ತವೆ.
94800 00417 / 83107 76233


# ಹರಿಹರದಲ್ಲಿ ವಿವಿಧ ಕಾಮಗಾರಿಗಳಿಗೆ ಸಂಸದ, ಶಾಸಕರ ಚಾಲನೆ



ಹರಿಹರ, ಡಿ.21- ನಗರದ ಹರಿಹರ, ಶಿವಮೊಗ್ಗ ರಸ್ತೆಯ ಮಧ್ಯದ ವಿಭಜಕದಲ್ಲಿ 50 ಲಕ್ಷ ರೂ.ಗಳ ವೆಚ್ಚದ ವಿದ್ಯುತ್ ಅಲಂಕಾರಿಕ ಎಲ್.ಇ.ಡಿ ದೀಪಗಳಿಗೆ, 50 ಲಕ್ಷರೂ ವೆಚ್ಚದ ವಿದ್ಯಾನಗರದ ಉದ್ಯಾನವನ ಕಾಮಗಾರಿಗೆ ಸಂಸದ ಜಿ.ಎಂ. ಸಿದ್ದೇಶ್ವರ ಮತ್ತು ಶಾಸಕ ಎಸ್. ರಾಮಪ್ಪ ಅವರುಗಳು ಇಂದು ಚಾಲನೆ ನೀಡಿದರು.


ಈ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಸಂಸದ ಸಿದ್ದೇಶ್ವರ ಅವರು, ನಗರದ ಅಭಿವೃದ್ಧಿಗೆ ದಾವಣಗೆರೆ - ಹರಿಹರ ಪ್ರಾಧಿಕಾರದಿಂದ ಅನೇಕ ಕೆಲಸಗಳಿಗೆ ಆದ್ಯತೆ ನೀಡಲಾಗಿದೆ. ಸ್ಥಳೀಯ ವಿದ್ಯಾನಗರ ಪಾರ್ಕ್ ಅನ್ನು ಸುಸಜ್ಜಿತವಾಗಿ ನಿರ್ಮಿಸಲು 50 ಲಕ್ಷ ರೂ.ಗಳ ವೆಚ್ಚದಲ್ಲಿ ಅಭಿವೃದ್ಧಿ ಮಾಡಲಾಗುತ್ತದೆ. ನಗರದ ಹಿಂದೂ ರುದ್ರಭೂಮಿ ಅಭಿವೃದ್ಧಿಗೆ 35 ಲಕ್ಷ ಸೇರಿದಂತೆ ನಗರದ ವಿವಿಧ ಕೆಲಸಗಳಿಗೆ ದೂಡಾದಿಂದ ಮಾಡಿಸಲಾಗುತ್ತಿದೆ ಎಂದು ಹೇಳಿದರು.

ಸಾರಥಿ ಗ್ರಾಮದ ಪಕ್ಕದಲ್ಲಿ ಗೊಬ್ಬರ ಕಾರ್ಖಾನೆ ಪ್ರಾರಂಭಿಸುವ ವಿಚಾರಕ್ಕೆ ದೆಹಲಿಯಿಂದ ಹಲವು ಅಧಿಕಾರಿಗಳು ಭೇಟಿ ನೀಡಿ, ಸ್ಥಳವನ್ನು ಪರಿಶೀಲನೆ ನಡೆಸಿ ವಿದ್ಯುತ್, ನೀರು, ರಸ್ತೆ, ರೈಲ್ವೆ, ಗ್ಯಾಸ್ ಸೇರಿದಂತೆ ಎಲ್ಲವೂ ಸರಿಯಾಗಿ ಇದೆ ಎಂದು ವರದಿಯನ್ನು ನೀಡಿದ್ದಾರೆ. ಶೀಘ್ರದಲ್ಲಿ ಕಾರ್ಖಾನೆಯ ನಿರ್ಮಾಣಕ್ಕೆ ಚಾಲನೆ ನೀಡಲಾಗುತ್ತದೆ.

ಶಾಸಕ ಎಸ್. ರಾಮಪ್ಪ ಮಾತನಾಡಿ, ನನ್ನ ಹೋರಾಟಕ್ಕೆ ಸುಮಾರು 1 ಕೋಟಿ 40 ಲಕ್ಷ ರೂ.ಗಳನ್ನು ದೂಡಾ ಬಿಡುಗಡೆ ಮಾಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದೆ. ನಗರದ ಇನ್ನೂ ಹಲವಾರು ಕೆಲಸಗಳಿಗೆ ಸುಮಾರು 40 ಲಕ್ಷ ರೂ. ವೆಚ್ಚದ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಬಿ.ಪಿ. ಹರೀಶ್, ಬಿಜೆಪಿ ಜಿಲ್ಲಾ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ದೇವೀರಮ್ಮ, ಸೌಭಾಗ್ಯ, ರಾಜು, ನಗರಸಭೆ ಸದಸ್ಯರಾದ ಹನುಮಂತಪ್ಪ, ಅಶ್ವಿನಿ, ಮಹಬೂಬ್ ಬಾಷಾ, ಬಾಬುಲಾಲ್, ಮುಖಂಡರಾದ ಬಾತಿ ಚಂದ್ರಶೇಖರ್, ಟಿ.ಜೆ. ಮುರುಗೇಶಪ್ಪ, ಅರುಣ್ ಬೊಂಗಾಳೆ, ಅಜಿತ್ ಸಾವಂತ್, ಪ್ರಮೀಳಾ ನಲ್ಲೂರು, ದೂಡಾ ಆಯುಕ್ತ ಕುಮಾರಸ್ವಾಮಿ, ನಗರಸಭೆ ಪೌರಾಯುಕ್ತ ಉದಯ್ ತಳವಾರ್, ಎಇಇ ಬಿರಾದಾರ್ ಮತ್ತು ಇತರರು ಹಾಜರಿದ್ದರು.

# ಹರಪನಹಳ್ಳಿ ತಾಲ್ಲೂಕಿನಾದ್ಯಂತ ಗ್ರಾ.ಪಂ.ಗಳಲ್ಲಿ ಬಿಜೆಪಿ ಅಧಿಕಾರಕ್ಕೆ



**ಶಾಸಕ ಜಿ.ಕರುಣಾಕರ ರೆಡ್ಡಿ ವಿಶ್ವಾಸ**

ಹರಪನಹಳ್ಳಿ, ಡಿ.21- ಹರಪನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣೆ ಜರುಗುವ 28 ಗ್ರಾಮ ಪಂಚಾಯ್ತಿಗಳಲ್ಲಿ ಕನಿಷ್ಟ 18 ರಿಂದ 21 ಪಂಚಾಯ್ತಿಗಳಲ್ಲಿ ಬಿಜೆಪಿ ಅಧಿಕಾರ ಹಿಡಿಯಲಿದೆ ಎಂದು ಶಾಸಕ ಜಿ.ಕರುಣಾಕರ ರೆಡ್ಡಿ ಅವರು ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ವಿವಿಧೆಡೆ ಕಾಂಕ್ರಿಟ್ ರಸ್ತೆ ಅಭಿವೃದ್ಧಿಗೆ ಭೂಮಿ ಪೂಜೆ ನೆರವೇರಿಸಿ ಸುದ್ದಿಗಾರರೊಂದಿಗೆ ಮಾತನಾಡಿದರು.

ಕೇಂದ್ರ ಹಾಗೂ ರಾಜ್ಯ ಬಿಜೆಪಿ ಸರ್ಕಾರಗಳ ಅಭಿವೃದ್ಧಿ ಕಾರ್ಯಗಳು ಹಾಗೂ ತಾಲ್ಲೂಕಿನಲ್ಲಿ ನಾನು ಕೈಗೊಂಡ ಅಭಿವೃದ್ಧಿ ಕಾರ್ಯಗಳನ್ನು ಗ್ರಾಮೀಣ ಮತದಾರರಿಗೆ ಮನವರಿಕೆ ಮಾಡಿಕೊಡಲು ಪಕ್ಷದ ಕಾರ್ಯಕರ್ತರಿಗೆ ಸೂಚಿಸಿದ್ದೇನೆ. ನಾನೂ ಸಹ ಪ್ರಚಾರ ಕೈಗೊಂಡಿದ್ದೇನೆ, ಬಿಜೆಪಿಗೆ ಉತ್ತಮ ವಾತಾವರಣವಿದೆ ಎಂದು ಅವರು ತಿಳಿಸಿದರು.


ಪುರಸಭಾ ಅಧ್ಯಕ್ಷ ಮಂಜುನಾಥ ಇಜಂತಕರ್, ಉಪಾಧ್ಯಕ್ಷೆ ಎನ್.ಭೀಮವ್ವ, ಬಿಜೆಪಿ ಘಟಕದ ಉಪಾಧ್ಯಕ್ಷ ಸಣ್ಣ ಹಾಲಪ್ಪ, ಜಿಲ್ಲಾ ಬಿಜೆಪಿ ಎಸ್.ಟಿ. ಘಟಕದ ಉಪಾಧ್ಯಕ್ಷ ಆರ್. ಲೋಕೇಶ್, ಪುರಸಭಾ ಸದಸ್ಯರುಗಳಾದ ಎಂ.ವಿ.ಅಂಜಿನಪ್ಪ, ಅಬ್ದುಲ್ ರಹಿಮಾನ್, ದ್ಯಾಮಜ್ಜಿ ರೊಕ್ಕಪ್ಪ, ಗೊಂಗಡಿ ನಾಗರಾಜ್, ಎಚ್.ಎಂ. ಅಶೋಕ್, ಟಿ.ವೆಂಕಟೇಶ್, ಜಾವೀದ್, ಕಿರಣ್ ಶಾನುಬಾಗ್, ಸುಮಾ ವಾಗೀಶ್, ಮುಖಂಡರಾದ ಎಂ.ಪಿ.ನಾಯ್ಕ, ಪ್ರಕಾಶ್ ಕೆಂಗಳ್ಳಿ, ಪುರಸಭಾ ಮುಖ್ಯಾಧಿಕಾರಿ ಬಿ.ಆರ್. ನಾಗರಾಜನಾಯ್ಕ, ಇಂಜಿನಿಯರ್ ಬಿರಾದಾರ, ಗುತ್ತಿಗೆದಾರ ಎಚ್. ಪ್ರವೀಣ್‌ಕುಮಾರ್, ಎಂ. ಸಂತೋಷ್, ಚಿಕ್ಕೇರಿ ಬಸಪ್ಪ, ಡಾ. ಎಂ.ಬಿ.ಅಧಿಕಾರ, ಶಿವಕುಮಾರ್ ಮತ್ತು ಇತರರು ಹಾಜರಿದ್ದರು.

# ವಿಜಯನಗರ ಜಿಲ್ಲೆ ಘೋಷಣೆ : ಬೈಕ್ ರ‍್ಯಾಲಿ




ಕೂಡ್ಲಿಗಿ, ಡಿ.21 - ರಾಜ್ಯದ 31ನೇ ಜಿಲ್ಲೆಯಾಗಿ ವಿಜಯನಗರವನ್ನು ಘೋಷಿಸಿರುವ ಸರ್ಕಾರದ ನಿರ್ಧಾರ ದಿಂದಾಗಿ ಎಲ್ಲಾ ಹೋರಾಟಗಾರರಿಗೆ ಸಂತೋಷವನ್ನುಂಟು ಮಾಡಿದೆ. ಕೂಡ್ಲಿಗಿ ಬಂಗಾರು ಹನುಮಂತು ಅವರ ನೇತೃತ್ವದಲ್ಲಿ ಅನೇಕ ಸಂಘಟನೆಗಳ ಮುಖಂಡರು ಕೂಡ್ಲಿಗಿ ತಾಲ್ಲೂಕಿನದ್ಯಾಂತ ಬೈಕ್ ರ‍್ಯಾಲಿ ನಡೆಸಿದರು. ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಸಚಿವ ಆನಂದ ಸಿಂಗ್ ಅವರುಗಳಿಗೆ ಧನ್ಯವಾದ ತಿಳಿಸಿದರು.

# ತುರ್ತು ವಾಹನದಲ್ಲಿ ಹೆಣ್ಣು ಮಗುವಿಗೆ ಜನ್ಮ




ಕೂಡ್ಲಿಗಿ, ಡಿ.21 - ತಾಲ್ಲೂಕು ಹುರುಳಿಹಾಳು ಮ್ಯಾಸರಹಟ್ಟಿ ಗ್ರಾಮದ ತುಂಬು ಗರ್ಭಿಣಿ ರೂಪ 108 ತುರ್ತು ವಾಹನದಲ್ಲಿ ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾಳೆ. ಸಿಬ್ಬಂದಿ ಜ್ಯೋತಿ ಹಾಗೂ ವಾಹನ ಚಾಲಕ ಖಾಜಾ ಸಾಬ್ ಅವರು, ತಮ್ಮ ಕರ್ತವ್ಯ ಹಾಗೂ ಸಮಯ ಪ್ರಜ್ಞೆ ಮೆರೆಯುವ ಮೂಲಕ ವಾಹನದಲ್ಲಿಯೇ ಹೆರಿಗೆ ಸೇವೆ ನಿರ್ವಹಿಸಿದ್ದಾರೆ. ರೂಪಾಳಿಗೆ ಹೆರಿಗೆ ನೋವು ಶುರುವಾದ ಸಂದರ್ಭದಲ್ಲಿ 108 ಸಿಬ್ಬಂದಿ ವಾಹನದೊಂದಿಗೆ ಮ್ಯಾಸರಹಟ್ಟಿಗೆ ತೆರಳಿದ್ದಾರೆ. ಚಿಕ್ಕಜೋಗಿಹಳ್ಳಿ ಯಲ್ಲಿನ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆಯ ನಂತರ ಜಗಳೂರು ಆಸ್ಪತ್ರೆಗೆ ತೆರಳುವ ಮಾರ್ಗ ಮಧ್ಯೆ ಆಂಬ್ಯುಲೆನ್ಸ್ ನಲ್ಲಿಯೇ ರೂಪ ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾರೆ. ತಾಯಿ - ಮಗು ಆರೋಗ್ಯವಾಗಿದ್ದಾರೆ.

# ಹಡಗಲಿ ಅರ್ಬನ್ ಬ್ಯಾಂಕ್ ಮಹಾಸಭೆ

**ಹೊಳಲು - ಕೊಟ್ಟೂರಿನಲ್ಲಿ ಶಾಖೆ ತೆರೆಯುವ ಭರವಸೆ**

ಹೂವಿನಹಡಗಲಿ, ಡಿ.21- ಹಡಗಲಿ ಅರ್ಬನ್ ಕೋ ಆಪರೇಟಿವ್ ಬ್ಯಾಂಕಿನ 22ನೇ ವಾರ್ಷಿಕ ಮಹಾಸಭೆಯು ಬ್ಯಾಂಕಿನ ಅಧ್ಯಕ್ಷ ಎಂ.ನಾಗಭೂಷಣ್ ಅವರ ಅಧ್ಯಕ್ಷತೆಯಲ್ಲಿ ಇಂದು ಜರುಗಿತು.

ಈ ಸಂದರ್ಭದಲ್ಲಿ ಬ್ಯಾಂಕಿನ ಮುಖ್ಯಾ ಕಾರ್ಯನಿರ್ವಹಾಧಿಕಾರಿ ಕೆ.ಸದಾನಂದ ಅವರು 2019-2020ನೇ ಸಾಲಿನ ವರದಿ ಮಂಡಿಸಿದರು. ಕೊಟ್ಟೂರು ಮತ್ತು ಹೊಳಲು ಗ್ರಾಮದಲ್ಲಿ ಎರಡು ಶಾಖೆಗಳನ್ನು ತೆರೆಯಲು ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಗಾಗಿ ಎದುರು ನೋಡುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ತೆರೆಯಲು ಆಡಳಿತ ಮಂಡಳಿ ಸಿದ್ಧತೆಯಲ್ಲಿದೆ ಎಂದು ತಿಳಿಸಿದರು.

ಬ್ಯಾಂಕು 53 ಲಕ್ಷದ 74 ಸಾವಿರದ 960 ರೂ. ನಿವ್ವಳ ಲಾಭವನ್ನು ಗಳಿಸಿದ್ದು, ಇದೇ ಮೊದಲ ಬಾರಿಗೆ ಮೊಬೈಲ್ ಮೂಲಕ ಲಾಗಿನ್ ಆಗುವಂತೆ ಸದಸ್ಯರಿಗೆ ಅಂತರ್ಜಾಲದ ಅನುಕೂಲತೆಗೆ ಒತ್ತು ಕೊಡಲಾಗಿದೆ. ಸ್ವಸಹಾಯ ಸಂಘಗಳಿಗೆ ಸಾಲ ಸೌಲಭ್ಯ ಒದಗಿಸುವುದು, ಆದ್ಯತಾ ವಲಯ ಮತ್ತು ದುರ್ಬಲ ವರ್ಗಗಳಿಗೆ ಸಾಲ ಸೌಲಭ್ಯ ನೀಡಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಟಿ.ಲಾಲ್ಯಾ ನಾಯ್ಕ, ನಿರ್ದೇಶಕರಾದ ಟಿ.ಮುರುಗೇಶ್, ಎಸ್.ಎಂ.ರವೀಂದ್ರ ಶೆಟ್ಟಿ, ಜಂಬಣ್ಣ ಗಣಪತಿ, ಸೊಪ್ಪಿನ ಮಂಗಳ, ಸುಮಾ ವಿಜಯ ಹಿರೇಮಠ, ಬೀರಪ್ಪ, ಕೆಂಚಮ್ಮನಹಳ್ಳಿ ಹಾಲಪ್ಪ ಉಪಸ್ಥಿತರಿದ್ದರು.

ಸಭೆಯ ಆರಂಭಕ್ಕೂ ಮೊದಲು ಸಹಕಾರಿಗಳಾದ ದಿ. ಎಸ್.ಈಶ್ವರಪ್ಪ, ದಿ. ಸೊಪ್ಪಿನ ಬಾಳಪ್ಪ, ದಿ. ಎಂ. ಶೇಖರಪ್ಪ, ದಿ.ನವಲಿ ಪಂಚಣ್ಣ ಇವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಗತಿಮಠದ ಶಿಷ್ಯ ವೃಂದದವರು ಪ್ರಾರ್ಥಿಸಿದರು. ಗದ್ದಿಗೌಡ, ಶಿವಣ್ಣ ಸ್ವಾಗತಿಸಿದರು.

# ಜಿಲ್ಲೆಗೆ ಎರಡು ವಿದ್ಯುತ್ ಘಟಕ

(1ನೇ ಪುಟದಿಂದ) ಉದ್ಯೋಗಗಳು ಸೃಷ್ಟಿಯಾಗಲಿವೆ.

ಹುಬ್ಬಳ್ಳಿ - ಧಾರವಾಡದಲ್ಲಿ ಎಲೆಸ್ಟ್ ಕಂಪನಿಯು ಎಲೆಕ್ಟ್ರಿಕ್ ವಾಹನಗಳನ್ನು ಉತ್ಪಾದಿಸುವ 2 ಯೋಜನೆಗಳಿಗೆ ಒಪ್ಪಿಗೆ ನೀಡಲಾಗಿದೆ. ಮೊದಲ ಯೋಜನೆಯಿಂದ 85 ಎಕರೆ ಜಮೀನಿನಲ್ಲಿ 14,255 ಕೋಟಿ ರೂ.ಗಳ ಘಟಕಗಳು ಸ್ಥಾಪನೆಯಾಗಲಿದ್ದು, 867 ಜನರಿಗೆ ಉದ್ಯೋಗ ದೊರೆಯುವ ನಿರೀಕ್ಷೆ ಇದೆ.

6,339 ಕೋಟಿ ರೂ. ವೆಚ್ಚದಲ್ಲಿ ಲಿಥಿಯಮ್ ಅಯಾನ್ ಸೆಲ್ ಹಾಗೂ ಬ್ಯಾಟರಿ ಉತ್ಪಾದಿಸುವ ಎಲೆಸ್ಟ್ ಕಂಪನಿಯ ಇನ್ನೊಂದು ಪ್ರಸ್ತಾವನೆಗೆ ಒಪ್ಪಿಗೆ ನೀಡಲಾಗಿದೆ. ಇದರಿಂದ 1,804 ಜನರಿಗೆ ಉದ್ಯೋಗ ಸಿಗಲಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ಕೈಗಾರಿಕಾ ವಲಯದಲ್ಲಿ 300 ಎಕರೆ ಪ್ರದೇಶದಲ್ಲಿ ಬ್ಯೂನೆಟ್ ಪ್ರೈವೇಟ್ ಕಂಪನಿಯು ಲಿಥಿಯಮ್ ಬ್ಯಾಟರಿ ಹಾಗೂ ಎಲೆಕ್ಟ್ರಾನಿಕ್ ವಾಹನಗಳನ್ನು ಉತ್ಪಾದಿಸಲು 1,825 ಕೋಟಿ ರೂ. ಹೂಡಿಕೆ ಮಾಡಲು ಅನುಮತಿ ನೀಡಲಾಗಿದೆ. ಇದರಿಂದ 2,210 ಉದ್ಯೋಗಗಳು ದೊರೆಯಲಿವೆ.

ಎಲ್.ಹೆಚ್.ಎಲ್.ಸಿ.ಸಿ. ಸಭೆಯಲ್ಲಿ ಉನ್ನತ ಹಾಗೂ ಮಧ್ಯಮ ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್, ಉಪಮುಖ್ಯಮಂತ್ರಿ ಅಶ್ವತ್ಥ ನಾರಾಯಣ್, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಗೌರವ್ ಗುಪ್ತ ಮತ್ತಿತರರು ಉಪಸ್ಥಿತರಿದ್ದರು.


15ರಿಂದ 100 ಕೋಟಿ ರೂ.ಗಳವರೆಗಿನ ಯೋಜನೆಗಳಿಗೆ ಕೈಗಾರಿಕಾ ಸಚಿವರ ನೇತೃತ್ವದ ರಾಜ್ಯ ಮಟ್ಟದ ಏಕ ಗವಾಕ್ಷಿ ಅನುಮತಿ ಸಮಿತಿ ಒಪ್ಪಿಗೆ ನೀಡುತ್ತದೆ.

100 ಕೋಟಿ ರೂ.ಗಳಿಗೂ ಹೆಚ್ಚಿನ ಹೂಡಿಕೆಯ ಯೋಜನೆಗಳಿಗೆ ಮುಖ್ಯಮಂತ್ರಿ ನೇತೃತ್ವದ ಸಮಿತಿ ಒಪ್ಪಿಗೆ ನೀಡಬೇಕಾಗುತ್ತದೆ.

# ಇಂದಿನಿಂದ ಓಶೋ ಧ್ಯಾನ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಷನ್ ಆಶ್ರಯದಲ್ಲಿ ಇಂದಿನಿಂದ ಇದೇ ದಿನಾಂಕ 27 ರವರೆಗೆ ಧ್ಯಾನ ಶಿಬಿರವನ್ನು ಪ್ರತಿದಿನ ಬೆಳಿಗ್ಗೆ 6 ಗಂಟೆಗೆ ಎಸ್.ಎಸ್. ಲೇಔಟ್‌ನಲ್ಲಿರುವ ಲಿಟ್ಲ್ ಚಾಂಪ್ಸ್ ಗುರುಕುಲಂ ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅರ್ಚನ (97385 72318), ಪುಷ್ಪ (90367 19573) ತಿಳಿಸಿದ್ದಾರೆ.

# ಭಾನುವಳ್ಳಿ ಗ್ರಾ.ಪಂ ಗೆ ಅವಿರೋಧ ಆಯ್ಕೆ



ಮಲೇಬೆನ್ನೂರು, ಡಿ. 21 – ಭಾನುವಳ್ಳಿ ಗ್ರಾ.ಪಂ ನ ಒಟ್ಟು 23 ಸ್ಥಾನಗಳ ಪೈಕಿ ಒಂದು ಸ್ಥಾನಕ್ಕೆ ಮಾತ್ರ ಅವಿರೋಧ ಆಯ್ಕೆ ನಡೆದಿದ್ದು ಉಳಿದ 22 ಸ್ಥಾನಗಳಿಗೆ ಇದೇ ದಿನಾಂಕ 27ರಂದು ಚುನಾವಣೆ ಜರುಗಲಿದೆ. ಗ್ರಾಮದ 1ನೇ ವಾರ್ಡ್‌ನ ಎಸ್ಸಿ ಮಹಿಳಾ ಕ್ಷೇತ್ರದಿಂದ ಶ್ರೀಮತಿ ಗಿರಿಜಮ್ಮ ಕೋಂ ಜಯಪ್ಪ ಇವರು ಅವಿರೋಧ ಆಯ್ಕೆಯಾಗಿದ್ದಾರೆ. ಗ್ರಾಮದಲ್ಲಿ ಒಟ್ಟು 7 ವಾರ್ಡ್‌ಗಳಿದ್ದು, 22 ಸ್ಥಾನಗಳಿಗೆ 58 ಅಭ್ಯರ್ಥಿಗಳು ಚುನಾವಣೆ ಎದುರಿಸಲಿದ್ದಾರೆ.

# ಕೆ.ಎನ್.ಹಳ್ಳಿ ಗ್ರಾ.ಪಂ ಗೆ ಅವಿರೋಧ ಆಯ್ಕೆ



ಮಲೇಬೆನ್ನೂರು, ಡಿ.21 - ಕಡಾರನಾಯ್ಕನಹಳ್ಳಿ ಗ್ರಾ.ಪಂ. ನ ಒಟ್ಟು 12 ಸ್ಥಾನಗಳಲ್ಲಿ 1 ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿದ್ದು, ಉಳಿದ 11 ಸ್ಥಾನಗಳಿಗೆ 27 ರಂದು ಚುನಾವಣೆ ಜರುಗಲಿದೆ. ಕಡಾರನಾಯ್ಕನಹಳ್ಳಿ ಗ್ರಾಮದ 3ನೇ ವಾರ್ಡ್‌ನಲ್ಲಿ ಎಸ್ಸಿ ಮಹಿಳಾ ಕ್ಷೇತ್ರದಿಂದ ಶ್ರೀಮತಿ ಮಂಜಮ್ಮ ಕೋಂ ಶೇಖರಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಗ್ರಾಮದಲ್ಲಿ ಉಳಿದ 8 ಸ್ಥಾನಗಳಿಗೆ 15 ಅಭ್ಯರ್ಥಿಗಳು ಮತ್ತು ಪಾಳ್ಯದಲ್ಲಿ 3 ಸ್ಥಾನಗಳಿಗೆ 7 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆ.


**GST Registration, INCOME TAX & GST CASES, Project Reports, and for Account Maintenances. Contact**
MEGHANA ASSOCIATES (R)
99809 16126

**Old Age care center** ನಲ್ಲಿ ಕೆಲಸ ಮಾಡಲು ಪುರುಷರು ಮತ್ತು ಮಹಿಳೆಯರು ಬೇಕಾಗಿದ್ದಾರೆ.
89711 92936

**'ಸೂರ್ಯ' ನವೋದಯ**
ಹೊಸ ಬ್ಯಾಚ್‌ಗಳು
25.12.2020ರಿಂದ ಪ್ರಾರಂಭ
ಆನ್‌ಲೈನ್‌ನಲ್ಲಿ ನವೋದಯ ತರಬೇತಿ
ಭಗೀರಥ ಸರ್ಕಲ್ ಹತ್ತಿರ, ಎಸ್.ಎಸ್. ಆಸ್ಪತ್ರೆ ರಸ್ತೆ, ದಾವಣಗೆರೆ.
ಸುರೇಶ ಪಿ. ಮುರಗಿ, ಎಂ.ಎಸ್ಸಿ., ಬಿ.ಇಡಿ.,
99028 24909

**ಮನೆ ಬಾಡಿಗೆಗೆ ಇದೆ**
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ, ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

**ಖಾಲಿ ಜಾಗ ಬಾಡಿಗೆಗೆ ಇದೆ**
5700 Sqft ಎಂ.ಸಿ.ಸಿ 'ಎ' ಬ್ಲಾಕ್, ರಾಮಕೃಷ್ಣ ಆಶ್ರಮ ಹತ್ತಿರ ವಿಶಾಲವಾದ, ವ್ಯಾಪಾರ ಮಾಡಲು ಅನುಕೂಲವಾದ ಜಾಗ ಬಾಡಿಗೆಗೆ ಇದೆ.
99806 13234
97438 93406

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

|| ಓಂ ಶ್ರೀ ಕಾಳಿದುರ್ಗಾದೇವಿ ಜ್ಯೋತಿಷ ಚಕಂ ||
ಅಸಾಧ್ಯವಾದದು ಇಲ್ಲಿ ಸಾಧ್ಯ, ಆರತಿ ಉಕ್ಕಡದಮ್ಮ ಚೌಡೇಶ್ವರಿ ಆರಾಧಕರು, ಬದುಕು ಒಂದು ವಿಸ್ಮಯ ಜ್ಯೋತಿಷ ಶಾಸ್ತ್ರವೇ ಒಂದು ದಾರಿದೀಪ ನಿಮ್ಮ ಸಮಸ್ಯೆಗಳಾದ ಧನ ಪ್ರಾಪ್ತಿ, ಆರ್ಥಿಕ ಸಮಸ್ಯೆ, ಆರೋಗ್ಯ, ಕೌಟುಂಬಿಕ ಕಲಹ, ಸಾಲದ ಬಾಧೆ, ದೃಷ್ಟಿಗ್ರಹ ಪೀಡೆ, ದಾಂಪತ್ಯ ಕಲಹ, ಮಾಟಮಂತ್ರ.
ಪಂಡಿತ್ ದೇವಿ ಪ್ರಸಾದ್ ಗುರೂಜಿ
80506 15925
ಫೋನಿನ ಮೂಲಕ ಕರೆಮಾಡಿ ಪರಿಹಾರ ಕಂಡುಕೊಳ್ಳಿ

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ಕೆಲಸ ಮಾಡಲು ಸೆಕ್ಯುರಿಟಿ ಸೂಪರ್‌ವೈಸರ್ ಮತ್ತು ಸೆಕ್ಯುರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ವಿದ್ಯಾರ್ಹತೆ : ಎಸ್ಸೆಸ್ಸೆಲ್ಸಿ ಪಾಸ್, ESI, PF ವೇತನ : 7,500 ರಿಂದ 10,000 ರೂ. ಕೊಡಲಾಗುವುದು. ಅನುಭವವಿರುವವರಿಗೆ ಆದ್ಯತೆ.
98440 53261, 99867 21420

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ಸ್ ಹಾಗೂ ಹೋಟೆಲ್ ಒಂದರಲ್ಲಿ ಕೆಲಸ ಮಾಡಲು ಪುರುಷ ಹೌಸ್ ಕೀಪಿಂಗ್ ಕೆಲಸಗಾರರು ಬೇಕಾಗಿದ್ದಾರೆ. ಊಟ, ವಸತಿ ಮತ್ತು ESI & PF ಸೌಲಭ್ಯವಿದೆ.
98861 22787
73539 50027

**Anjum Education society (R)**
**WANTED POST FOR ANJUM HIGHER PRIMARY SCHOOL (Kan & Urdu Medium)**
Bhagath Singh Nagara, Davanagere.
Bsc BEd,. PCM & CBZ & BA, B.Ed., English Major
apply or attend immediately, above address.

**ಬೇಕಾಗಿದ್ದಾರೆ**
ಹರಿಹರದ ಹೋಟೆಲ್‌ನಲ್ಲಿ ತಿಂಡಿ ಮಾಡಲು ಅನುಭವಿ ಭಟ್ಟರು ಬೇಕಾಗಿದ್ದಾರೆ. ತಕ್ಷಣ ಸಂಪರ್ಕಿಸಿ
63614 36969


# ಶ್ರೀಮತಿ ಪದ್ಮಾ ನಿಧನ



ರಾಮಗೊಂಡನಹಳ್ಳಿ ಗ್ರಾಮದ ಬಿ.ನಿಂಗಪ್ಪ ನವರ ಧರ್ಮಪತ್ನಿ
**ಶ್ರೀಮತಿ ಪದ್ಮ** (51)
ಇವರು ದಿನಾಂಕ 21.12.2020 ರ ಸೋಮವಾರ ಮಧ್ಯಾಹ್ನ 2.00 ಗಂಟೆಗೆ ನಿಧನರಾಗಿರುತ್ತಾರೆ. ಪತಿ, ಓರ್ವ ಪುತ್ರಿ, ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನು ದಿನಾಂಕ 22.12.2020 ರ ಮಂಗಳವಾರ ಮಧ್ಯಾಹ್ನ 12.30 ಗಂಟೆಗೆ ಮೃತರ ಸ್ವಗ್ರಾಮದಲ್ಲಿ ನೆರವೇರಿಸಲಾಗುವುದು.
ಇಂತಿ ದುಃಖತಪ್ತರು
**ಪತಿ: ಬಿ. ನಿಂಗಪ್ಪನವರು ಮತ್ತು ಮಕ್ಕಳು ಹಾಗೂ**
ಕುಟುಂಬ ವರ್ಗದವರು ಹಾಗೂ ಬಂಧು -ಮಿತ್ರರು, ರಾಮಗೊಂಡನಹಳ್ಳಿ.
94821 09127, 81978 34463


**ಬೇಕಾಗಿದ್ದಾರೆ**
ನಗರದ ಪ್ಯಾಕೇಜ್ಡ್ ಡ್ರಿಂಕಿಂಗ್ ವಾಟರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಬ್ಯಾಡ್ಜ್ ಹಾಗೂ ಲೈಸೆನ್ಸ್ ಹೊಂದಿರುವ ಡ್ರೈವರ್ ಬೇಕಾಗಿದ್ದಾರೆ.
ಸಂಪರ್ಕಿಸಿ : ಪ್ರತೀಕ್ ಎಂಟರ್ ಪ್ರೈಸಸ್
ನಾಗನೂರು ರಸ್ತೆ, ಶಾಮನೂರು,ದಾವಣಗೆರೆ.
ಮೊ: 94481 10287

**TO LET**
Ground Floor, 3 BHK, No. 303/4, Rohini Complex, P.J. Extension, Stadium Road, Near Vinayaka Medical Stores, Davangere.
96111 74878
89707 89513

NGO ವಿದ್ಯಾಸಂಸ್ಥೆ, ಮಹಿಳಾ ಸಂಘ, ಸ್ವ-ಸಹಾಯ ಸಂಘಗಳ ನವೀಕರಣ, TRUST Registration ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ:
MEGHANA ASSOCIATES (R)
99809 16126

**JOBS**
MCS ACADEMY
Training & Placement Cell
98444 92888

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಬೇಕಾಗಿದ್ದಾರೆ**
ಟೈರ್ ಶೋರೂಂನಲ್ಲಿ ಕೆಲಸ ಮಾಡಲು 10th ಪಾಸ್/ಫೇಲ್ ಆಗಿರುವವರು ಬೇಕಾಗಿದ್ದಾರೆ.
ನಂದಿ ಟೈರ್ ಪ್ಲಾನೆಟ್
ಮೊ: 95381 87385
ಲ್ಯಾಂಡ್: 08192 261003
ಮೊ: 99161 43003

**ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ**
ದಾವಣಗೆರೆ ನಗರದಲ್ಲಿರುವ ಹೋಲ್ ಸೇಲ್ ಫಾರ್ಮಾದಲ್ಲಿ ಕೆಲಸ ಮಾಡಲು ಡೆಲಿವರಿ ಹುಡುಗರು ಬೇಕಾಗಿದ್ದಾರೆ. ಸೈಕಲ್ ಇದ್ದವರಿಗೆ ಆದ್ಯತೆ ನೀಡಲಾಗುವುದು. ಸಂಪರ್ಕಿಸಿ:
08192 272684

**ತಕ್ಷಣ ಬೇಕಾಗಿದ್ದಾರೆ**
Samson Distillery ದುಗ್ಗಾವತಿ ಹಾಗೂ SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ದಾವಣಗೆರೆಯ ಸುತ್ತಮುತ್ತಲಿನಲ್ಲಿ 8 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಹಾಗೂ ಲೇಡಿ ಸೆಕ್ಯೂರಿಟಿಗಳು ತಕ್ಷಣ ಬೇಕಾಗಿದ್ದಾರೆ. ESI-PF ಸೌಲಭ್ಯ ಇರುತ್ತದೆ. ತಕ್ಷಣ ಸಂಪರ್ಕಿಸಿ :
ಅಸೋಸಿಯೇಟೆಡ್ ಎಂಟರ್ ಪ್ರೈಸಸ್, ದಾವಣಗೆರೆ.
99169 29713, 90605 45500, 97390 89022

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ:
ಗಾಂಧಿ ಸರ್ಕಲ್, ದಾವಣಗೆರೆ.
89716 99826

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
S.S.L.C., PUC, Technical & Non Technical Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ದಾವಣಗೆರೆ.
87490 24789, 94837 64859, 87620 58369
82173 02649, 80507 27467

**ಕೆಲಸಗಾರರು ಬೇಕಾಗಿದ್ದಾರೆ**
ವಿನಾಯಕ ಸಾರಿಗೆ ಸಂಸ್ಥೆಯಲ್ಲಿ ಚಾಲಕ ಹಾಗೂ ನಿರ್ವಾಹಕ ಹುದ್ದೆಗೆ ಕೆಲಸಗಾರರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು (ಪುರುಷರಿಗೆ/ಮಹಿಳೆಯರಿಗೆ ಆದ್ಯತೆ)
94824 76109
91642 22937

**ಡ್ರೈವರ್ ಬೇಕಾಗಿದ್ದಾರೆ**
APE/Maximo ಗಾಡಿ ಓಡಿಸಲು ಲೈಸೆನ್ಸ್ ಉಳ್ಳವರು ಬೇಕಾಗಿದ್ದಾರೆ. ಸಂಪರ್ಕಿಸಿ:
88619 45934


# ಬ್ಯಾಲದಹಳ್ಳಿ: ಅಪಘಾತದಲ್ಲಿ 2 ಸಾವು

ಮಲೇಬೆನ್ನೂರು, ಡಿ.21- ಪ್ರಯಾಣಿಕರಿದ್ದ ಆಟೋ ಮತ್ತು ಕಾರು ನಡುವಿನ ಡಿಕ್ಕಿಯಲ್ಲಿ ಆಟೋದಲ್ಲಿದ್ದ ಪ್ರಯಾಣಿಕರಿಬ್ಬರು ಸಾವಿಗೀಡಾಗಿದ್ದು, ಐವರಿಗೆ ತೀವ್ರವಾಗಿ ಪೆಟ್ಟಾಗಿರುವ ಘಟನೆ ಸೋಮವಾರ ಬೆಳಿಗ್ಗೆ ಬ್ಯಾಲದಹಳ್ಳಿ ಬಳಿ ನಡೆದಿದೆ. ಉಕ್ಕಡಗಾತ್ರಿಯ ಗದಿಗೆಪ್ಪ (50) ಎಂಬಾತ ಸ್ಥಳದಲ್ಲಿಯೇ ಮೃತಪಟ್ಟರೆ, ಮಲೇಬೆನ್ನೂರು ವಾಸಿ ಜಿಗಳಿಯ ಚನ್ನಬಸಮ್ಮ (60) ಆಸ್ಪತ್ರೆಗೆ ಹೋಗುವ ಮಾರ್ಗ ಮಧ್ಯೆ ಕೊನೆಯುಸಿರೆಳೆದಿದ್ದಾರೆ.

# ಅಪರಿಚಿತ ಯುವಕನ ಶವ ಪತ್ತೆ

ದಾವಣಗೆರೆ, ಡಿ.21- ಕೈದಾಳಿನ ಸಾಲಕಟ್ಟೆ ಮಲ್ಲಪ್ಪನವರ ಹೊಲದ ನೇರ ಸರ (ಕಾಲುವೆಯಲ್ಲಿ) ಸುಮಾರು 25 ರಿಂದ 30 ವರ್ಷ ವಯಸ್ಸಿನ ಶವ ನಿನ್ನೆ ಪತ್ತೆಯಾಗಿದೆ. ಬಾಯಾರಿಕೆಯಿಂದ ನೀರು ಕುಡಿಯಲು ಹೋದಾಗ ಕಾಲು ಜಾರಿ ಅಥವಾ ಮದ್ಯಸೇವನೆ ಮಾಡಿಯೋ ಬಂದು ಮೃತಪಟ್ಟಿರಬಹುದೆಂದು ಶಂಕಿಸಲಾಗಿದೆ. ಹಸಿರು ಮತ್ತು ಹಳದಿ ಬಣ್ಣದಿಂದ ಕೂಡಿರುವ ತುಂಬು ತೋಳಿನ ಟೀ ಶರ್ಟ್, ಕಪ್ಪು ಬಣ್ಣದ ಚಡ್ಡಿ ಧರಿಸಿರುವ ಮೃತನ ಬಲಗೈಯಲ್ಲಿ ಅಮ್ಮ, ನಾಗ, ಕುಮಾರ ಎಂದು ಅಚ್ಚೆ ಗುರುತು ಇದೆ. ಸಂಬಂಧಪಟ್ಟವರು ಹದಡಿ ಪೊಲೀಸ್ ಠಾಣೆ (08192-218405, ಮೊ.94808 03254) ಯನ್ನು ಸಂಪರ್ಕಿಸಬಹುದು.

# ಡಿ.ನಂಜುಂಡಪ್ಪ ನಿಧನ



ದಾವಣಗೆರೆ ಸಿಟಿ ಸ್ವಾಮಿ ವಿವೇಕಾನಂದ ಬಡಾವಣೆ 6ನೇ ಕ್ರಾಸ್ ವಾಸಿ ಶ್ರೀ ಡಿ. ನಂಜುಂಡಪ್ಪ (ನಿವೃತ್ತ ಉಪನ್ಯಾಸಕರು) (74) ಅವರು, ದಿನಾಂಕ 22.12.2020ರ ಮಂಗಳವಾರ ಬೆಳಗಿನ ಜಾವ 12.20ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರಿ, ಇಬ್ಬರು ಪುತ್ರರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.12.2020ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

# 25ಕ್ಕೆ ಶ್ರೀ ಬನ್ನಿ ಮಹಾಂಕಾಳಮ್ಮ ಕಾರ್ತಿಕೋತ್ಸವ

ದಾವಣಗೆರೆ, ಡಿ.21- ನಗರದ ಕೆ.ಬಿ. ಬಡಾವಣೆಯ ಕೆ.ಟಿ.ಜೆ ಕಾಂಪೌಂಡ್‌ನಲ್ಲಿರುವ ಶ್ರೀ ಬನ್ನಿ ಮಹಾಂಕಾಳಮ್ಮ ದೇವಸ್ಥಾನದ ಕಾರ್ತಿಕೋತ್ಸವ ಇದೇ ದಿನಾಂಕ 25 ರ ಶುಕ್ರವಾರ ಸಂಜೆ 7 ಕ್ಕೆ ನಡೆಯಲಿದೆ. ವಾಣಿವಿಲಾಸ್ ಎಂ. ಚಂದ್ರಕಾಂತಮ್ಮ, ಎಸ್. ಆರ್. ಮುರಿಗೆಪ್ಪನವರ ಮಕ್ಕಳು ಪ್ರಸಾದದ ಸೇವಾರ್ಥಿಗಳಾಗಿದ್ದಾರೆ ಎಂದು ವಾಣಿ ಭೂಷಣ್ಣ ಗೆಳೆಯರ ಬಳಗ, ಶ್ರೀ ಬನ್ನಿಮಹಂಕಾಳಮ್ಮ ಮಹಿಳಾ ವೃಂದ ತಿಳಿಸಿದೆ.

## ಇಂದು ಪಂಚಾಯ್ತಿ ಚುನಾವಣೆ



**ದಾವಣಗೆರೆ ಡಿ.21- ಮೊದಲನೇ ಹಂತದ ಗ್ರಾ.ಪಂ ಚುನಾವಣೆ ಹಿನ್ನೆಲೆಯಲ್ಲಿ ನಗರದ ಮೋತಿ ವೀರಪ್ಪ ಶಾಲಾ ಆವರಣದಲ್ಲಿ ಮಸ್ಟರಿಂಗ್ ಕಾರ್ಯ ನಡೆಯಿತು. ಸಿಬ್ಬಂದಿಗಳು ತಮಗೆ ನೀಡಿದ ಪೆಟ್ಟಿಗೆಗಳೊಂದಿಗೆ ಬಸ್ ಮೂಲಕ ಚುನಾವಣಾ ಸ್ಥಳಕ್ಕೆ ತೆರಳಿದರು.**

**(1ನೇ ಪುಟದಿಂದ)** 291 ಸ್ಥಾನಗಳ ಹಣೆಬರಹವನ್ನು ಮತದಾರರು ನಿರ್ಧರಿಸಲಿದ್ದಾರೆ. ಜಿಲ್ಲೆಯಲ್ಲಿ 1,90,452 ಪುರುಷ ಹಾಗೂ 1,87,638 ಮಹಿಳಾ ಮತದಾರರೂ ಸೇರಿದಂತೆ 3,78,090 ಮತದಾರರಿದ್ದಾರೆ.

ಚುನಾವಣೆಯನ್ನು ಸುಸೂತ್ರವಾಗಿ ನೆರವೇರಿಸಲು 3,108 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ದಾವಣಗೆರೆ ತಾಲ್ಲೂಕಿಗೆ ತಲಾ 330 ಪಿಆರ್‌ಓ ಹಾಗೂ ಎಪಿಆರ್‌ಓ ಹಾಗೂ 660 ಪಿಓಗಳನ್ನು ನೇಮಿಸಲಾಗಿದೆ.

ಜಗಳೂರಿಗೆ ತಲಾ 263 ಪಿಆರ್‌ಓ ಹಾಗೂ ಎಪಿಆರ್‌ಓ ಮತ್ತು 526 ಪಿಓಗಳನ್ನು ನಿಯೋಜಿಸಲಾಗಿದೆ. ಹೊನ್ನಾಳಿಗೆ ತಲಾ 181 ಪಿಆರ್‌ಓ ಹಾಗೂ ಎಪಿಆರ್‌ಓ ಹಾಗೂ 368 ಪಿಓಗಳನ್ನು ನೇಮಿಸಲಾಗಿದೆ.

ದಾವಣಗೆರೆ ತಾಲ್ಲೂಕಿಗೆ ತಲಾ 38 ಚುನಾವಣಾಧಿಕಾರಿಗಳು ಹಾಗೂ ಸಹಾಯಕ ಚುನಾವಣಾಧಿಕಾರಿಗಳು ಮತ್ತು 14 ಸೆಕ್ಟರ್ ಅಧಿಕಾರಿಯನ್ನು ನೇಮಿಸಲಾಗಿದೆ. ಹೊನ್ನಾಳಿಯಲ್ಲಿ ತಲಾ 29 ಚುನಾವಣಾಧಿಕಾರಿಗಳು ಹಾಗೂ ಸಹಾಯಕ ಚುನಾವಣಾಧಿಕಾರಿಗಳು ಮತ್ತು 10 ಸೆಕ್ಟರ್ ಅಧಿಕಾರಿಗಳು ಇರಲಿದ್ದಾರೆ. ಜಗಳೂರಿನಲ್ಲಿ 22 ಚುನಾವಣಾ ಅಧಿಕಾರಿಗಳು, 23 ಸಹಾಯಕ ಚುನಾವಣಾ ಅಧಿಕಾರಿಗಳು ಹಾಗೂ 8 ಸೆಕ್ಟರ್ ಅಧಿಕಾರಿಗಳಿರಲಿದ್ದಾರೆ.


# ಭದ್ರಾ ಅಚ್ಚುಕಟ್ಟಿನ ಯೋಜನೆಗೆ 400 ಕೋಟಿ ರೂ.ಗೆ ಪ್ರಸ್ತಾವನೆ

## ಜನವರಿ 5 ರಿಂದ ಬೇಸಿಗೆ ಬೆಳೆಗಾಗಿ ನಾಲೆಗಳಿಗೆ ನೀರು : ಕಾಡಾ ಅಧ್ಯಕ್ಷರಾದ ಪವಿತ್ರ ರಾಮಯ್ಯ

ಮಲೇಬೆನ್ನೂರು, ಡಿ.21- ಭದ್ರಾ ಅಚ್ಚುಕಟ್ಟಿನ ಅಭಿವೃದ್ಧಿ ಯೋಜನೆಗಳಿಗೆ ಸುಮಾರು 400 ಕೋಟಿ ರೂ. ಅನುದಾನ ನೀಡುವಂತೆ ನೀರಾವರಿ ಸಚಿವರಾದ ರಮೇಶ್ ಜಾರಕಿಹೊಳಿ ಅವರಿಗೆ ಮನವಿ ಮಾಡಿದ್ದು, ಅವರು ಪೂರಕವಾಗಿ ಸ್ಪಂದಿಸಿದ್ದಾರೆ ಎಂದು ಭದ್ರಾ ಕಾಡಾ ಅಧ್ಯಕ್ಷೆ ಶ್ರೀಮತಿ ಪವಿತ್ರ ರಾಮಯ್ಯ ತಿಳಿಸಿದ್ದಾರೆ.

ಮಲೇಬೆನ್ನೂರು ಸಮೀಪ ಭದ್ರಾ ನಾಲೆಗೆ ನಿರ್ಮಿಸುತ್ತಿರುವ ಸೇತುವೆ ಕಾಮಗಾರಿ ಮತ್ತು ಭದ್ರಾ ನಾಲಾ ನಂ. 3 ಉಪ ವಿಭಾಗ ವ್ಯಾಪ್ತಿಯ ಉಪಕಾಲುವೆಗಳಲ್ಲಿ ಹೂಳು ತೆಗೆಯುವ ಕಾಮಗಾರಿಗಳನ್ನು ಇಂದು ವೀಕ್ಷಿಸಿದ ಅವರು, ನಂತರ ಮಾತನಾಡಿದರು.

ಇದುವರೆಗೆ ವಿವಿಧ ಕಾಮಗಾರಿಗಳಿಗೆ 22 ಕೋಟಿ ರೂ. ಅನುದಾನ ನೀಡುವಂತೆ ರೈತರು ತಮ್ಮನ್ನು ಭೇಟಿಯಾಗಿ ಮನವಿ ಪತ್ರ ನೀಡಿದ್ದಾರೆ. ನಾನು ಈ ಬಗ್ಗೆ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಬಳಿ ಚರ್ಚಿಸಿದಾಗ ತಕ್ಷಣ 5 ಕೋಟಿ ರೂ. ಅನುದಾನ ಬಿಡುಗಡೆಗೆ ಸೂಚನೆ ನೀಡಿದ್ದಾರೆ ಎಂದು ಹೇಳಿದರು.



ಕೊರೊನಾ ಕಾರಣದಿಂದಾಗಿ ನಾವು ನಿರೀಕ್ಷೆ ಮಾಡಿದಷ್ಟು ಅನುದಾನ ಸಿಗುವುದು ಕಷ್ಟವಾಗಿರುವುದರಿಂದ ಕಾಲುವೆಗಳಲ್ಲಿ ಹೂಳು ತೆಗೆಯುವ ಕೆಲಸವನ್ನು ರೈತರೇ ಮಾಡಿಕೊಂಡು ಮಾದರಿಯಾಗಬೇಕೆಂದು ಪವಿತ್ರ ರಾಮಯ್ಯ ಮನವಿ ಮಾಡಿದರು.

ಭದ್ರಾ ಕಾಡಾ 12 ಜಿಲ್ಲೆಗಳನ್ನು ಒಳಗೊಂಡಿದ್ದು, 5 ಲಕ್ಷ ಹೆಕ್ಟೇರ್ ಅಚ್ಚುಕಟ್ಟು ಹೊಂದಿದೆ. ಮಲೇಬೆನ್ನೂರು ಮತ್ತು ದಾವಣಗೆರೆ ವಿಭಾಗಗಳ ಕೊನೆ ಭಾಗಕ್ಕೆ ನೀರಿನ ತೊಂದರೆ ಆಗುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಹಾಗಾಗಿ ಈ ಬೇಸಿಗೆ ಬೆಳೆಯ ಸಂದರ್ಭದಲ್ಲಿ ಅಚ್ಚುಕಟ್ಟಿನ ಕೊನೆ ಭಾಗದ ರೈತರಿಗೆ ನೀರಿನ ತೊಂದರೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನನ್ನದು ಎಂದು ಪವಿತ್ರ ಅವರು ಕೊನೆ ಭಾಗದ ರೈತರಿಗೆ ಭರವಸೆ ನೀಡಿದರು.

ಕೊನೆ ಭಾಗಕ್ಕೆ ಸಮರ್ಪಕವಾಗಿ ನೀರು ತಲುಪಿಸುವ ತನಕ ನಿಮ್ಮನ್ನು ನಿದ್ದೆ ಮಾಡುವುದಕ್ಕೆ ಬಿಡುವುದಿಲ್ಲ ಎಂದು ಸ್ಥಳದಲ್ಲಿದ್ದ ಇಇ ಚಿದಂಬರಲಾಲ್, ಎಇಇ ಸಂತೋಷ್ ಅವರಿಗೆ ಎಚ್ಚರಿಕೆ ನೀಡಿದರು.

ಭದ್ರಾ ನಾಲೆಗಳಿಗೆ ಅಕ್ರಮವಾಗಿ ಹಾಕಿಕೊಂಡಿರುವ ಪಂಪ್‌ಸೆಟ್‌ಗಳನ್ನು ತೆರವು ಮಾಡಿಸುವ ಅಧಿಕಾರ ನನಗಿಲ್ಲ. ಹಾಗಾಗಿ ಆ ಕೆಲಸ ನಮ್ಮಿಂದ ಸಾಧ್ಯವಿಲ್ಲ ಎಂದು ಪವಿತ್ರ ಅವರು, ಹೊಳೆಸಿರಿಗೆರೆಯ ಆರ್.ಟಿ. ಸೋಮಶೇಖರಪ್ಪ, ಎಂ. ತಿಪ್ಪೇರುದ್ರಪ್ಪ, ಪಾಲಾಕ್ಷಪ್ಪ ಅವರು ಮಾಡಿದ ಮನವಿಗೆ ಉತ್ತರಿಸಿದರು.

ಬರುವ ಜನವರಿ 2 ರಂದು ಭದ್ರಾ ಕಾಡಾ ಸಭೆ ನಡೆಸಿ, ಜನವರಿ 5 ರಿಂದ ಬೇಸಿಗೆ ಬೆಳೆಗಾಗಿ ಭದ್ರಾ ನಾಲೆಗಳಿಗೆ ನೀರು ಹರಿಸುವ ಸಾಧ್ಯತೆ ಇದೆ ಎಂದು ತಿಳಿಸಿದ ಪವಿತ್ರ ಅವರು, ಕೊನೆ ಭಾಗದ ರೈತರ ಒತ್ತಾಸೆಯಂತೆ ಮುಂದಿನ ಭದ್ರಾ ಕಾಡಾ ಸಭೆಯನ್ನು ಮಲೇಬೆನ್ನೂರು ಅಥವಾ ದಾವಣಗೆರೆಯಲ್ಲಿ ನಡೆಸುವುದಾಗಿ ಪ್ರಕಟಿಸಿದರು.

ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಶಕ್ತಿ ನೀಡುವ ಉದ್ದೇಶವಿದ್ದು, ಮುಂದಿನ ದಿನಗಳಲ್ಲಿ ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಹೋರಾಟ ಮಾಡುತ್ತೇನೆಂದು ನೀರು ಬಳಕೆದಾರರ ಸಹಕಾರ ಸಂಘದ ಅಧ್ಯಕ್ಷರೂ ಆದ ಎಪಿಎಂಸಿ ಸದಸ್ಯ ಜಿ. ಮಂಜುನಾಥ್ ಪಟೇಲ್ ಅವರ ಕೋರಿಕೆಗೆ ಪವಿತ್ರ ರಾಮಯ್ಯ ಸ್ಪಂದಿಸಿದರು.

ಕೊನೆ ಭಾಗಕ್ಕೆ ನೀರು ಸರಾಗವಾಗಿ ಹರಿಯಬೇಕೆಂದರೆ ಮೊದಲು ಕಾಲುವೆಗಳಲ್ಲಿ ತುಂಬಿಕೊಂಡಿರುವ ಹೂಳನ್ನು ತೆಗೆಸಿ ಕಾಲುವೆಗಳ ದುರಸ್ತಿ ಕಾಮಗಾರಿಯನ್ನು ನಾಲೆಗೆ ನೀರು ಬಿಡುಗಡೆ ಮಾಡುವುದರ ಒಳಗಾಗಿ ಸಾಧ್ಯವಾದಷ್ಟು ಮಾಡಿಸಿ, ರೈತರಿಗೆ ನೆರವಾಗಿ ಎಂದು ಡಿಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ ಈ ವೇಳೆ ಒತ್ತಾಯಿಸಿದರು.

ಅಲ್ಲದೆ ಕುಣೆಬೆಳಕೆರೆಯ ಅಂಜಿನಪ್ಪ ಕೂಡಾ ಕಾಲುವೆಗಳಲ್ಲಿ ಹೂಳು ತೆಗೆಸುವ ವಿಷಯ ಪ್ರಸ್ತಾಪಿಸಿದಾಗ ಕಾಡಾ ಅಧ್ಯಕ್ಷರು ಉತ್ತರಿಸಿ, ಇದೊಂದು ಬಾರಿ ಸಣ್ಣ ಸಣ್ಣ ಕಾಲುವೆಗಳಲ್ಲಿರುವ ಹೂಳನ್ನು ನೀವೇ ತೆಗೆಸಿ, ಸರ್ಕಾರದ ಜೊತೆ ಕೈ ಜೋಡಿಸಿ ಎಂದು ಕೇಳಿಕೊಂಡರು.

ನೀರು ಬಳಕೆದಾರರ ಸಂಘದ ಅಧ್ಯಕ್ಷ ಬಿ. ವೀರಯ್ಯ, ಕಾರ್ಯದರ್ಶಿ ಪೂಜಾರ್ ಹಾಲೇಶ್, ಪೂಜಾರ್ ರಂಗನಾಥ್, ಕೊಕ್ಕನೂರು ಸೋಮಶೇಖರ್, ಜಿಗಳಿಯ ಜಿ.ಎಂ. ಆನಂದಪ್ಪ, ಕುಣೆಬೆಳಕೆರೆ ರವಿ, ಕೆ.ಪಿ. ಗಂಗಾಧರ್ ಮತ್ತಿತರರು ಈ ವೇಳೆ ಹಾಜರಿದ್ದರು.

# ಸೆಸ್ ಹೆಚ್ಚಳ : ವರ್ತಕರಿಂದ ಪ್ರತಿಭಟನೆ





ವರ್ತಕರು, ದಲ್ಲಾಳಿಗಳ ಪ್ರತಿಭಟನೆ ಹಿನ್ನೆಲೆಯಲ್ಲಿ ಎಪಿಎಂಸಿ ಮಾರುಕಟ್ಟೆ ಬಿಕೋ ಎನ್ನುತ್ತಿರುವುದು.

**(1ನೇ ಪುಟದಿಂದ)** ಜಿಲ್ಲಾಡಳಿತ ಭವನಕ್ಕೆ ತೆರಳಿ ಜಿಲ್ಲಾಧಿಕಾರಿಗಳ ಮೂಲಕ ಹಳೆಯ ಶುಲ್ಕವನ್ನೇ ಮುಂದುವರೆಸುವಂತೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಕರ್ನಾಟಕ ಸರ್ಕಾರ ಯಾವುದೇ ಮುನ್ಸೂಚನೆ ನೀಡದೇ, ಸಂಘ-ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಚರ್ಚಿಸದೇ ಏಕಾಏಕಿ ದಿಢೀರ್ ಶೇ. 0.35ರಷ್ಟಿದ್ದ ಸೆಸ್ ಅನ್ನು ಶೇ.1ಕ್ಕೆ ಏರಿಕೆ ಮಾಡಿರುವುದು ಸರ್ಕಾರದ ಅವೈಜ್ಞಾನಿಕ ನಡೆಯಾಗಿದೆ. ಇದು ನೇರವಾಗಿ ರೈತರ ಶೋಷಣೆಗೆ ಕಾರಣವಾಗಲಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಇತ್ತೀಚಿನ ಎಪಿಎಂಸಿ ಕಾಯ್ದೆಗಳ ಅನ್ವಯ ರಾಜ್ಯ ಸರ್ಕಾರಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಎಪಿಎಂಸಿ ಪ್ರಾಂಗಣ ಹೊರತು ಪಡಿಸಿ, ಬೇರೆಡೆ ಮಾರಾಟ ಮಾಡಿದರೆ ಅದಕ್ಕೆ ಶುಲ್ಕ ವಿನಾಯಿತಿ ಮಾಡಿ ಆದೇಶಿಸಿದೆ. ಇದರಿಂದ ಹೆಚ್ಚಿನ ರೈತರು, ವ್ಯಾಪರಸ್ಥರು ಶುಲ್ಕವಿಲ್ಲದ ಕಡೆಯಲ್ಲಿ ವ್ಯವಹರಿಸುವುದರಿಂದ ಮಾರುಕಟ್ಟೆಯಲ್ಲಿ ಹಣ ತೊಡಗಿಸಿರುವ ದಲ್ಲಾಳಿಗಳಿಗೆ ಮತ್ತು ಇದನ್ನೇ ವೃತ್ತಿಯನ್ನಾಗಿಸಿಕೊಂಡ ಹಮಾಲರು ಮತ್ತು ಕೂಲಿ ಕಾರ್ಮಿಕರು ಜೀವನ ನಡೆಸುವುದು ಕಷ್ಟ ಎಂದು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಅಜ್ಜಂಪುರ ಶೆಟ್ರು ಶಂಭು ಲಿಂಗಪ್ಪ ತಿಳಿಸಿದರು.

ಎಪಿಎಂಸಿ ಪ್ರಾಂಗಣ ದಲ್ಲಿ ಮಾರಾಟ ಮಾಡಿದರೆ ಶೇ. 0.35ರಷ್ಟು ಶುಲ್ಕ ವಿದ್ದು, ಈಗ ಅದನ್ನು ಶೇ. 1ಕ್ಕೆ ಏರಿಕೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿ ರುವುದರಿಂದ ವ್ಯಾಪಾರ ಸ್ಥರು ಎಪಿಎಂಸಿ ಕಡೆಗೆ ಬರುವುದಿಲ್ಲ. ಬೇರೆ ಕಡೆ ಮಾರಾಟಕ್ಕೆ ಮುಂದಾಗಲಿ ದ್ದಾರೆ. ಆಗ ಮಾರುಕಟ್ಟೆಗೆ ಕೃಷಿ ಉತ್ಪನ್ನಗಳು ಬರದಂ ತಾಗಲಿವೆ ಎಂದರು. ಸರ್ಕಾರದ ಈ ಧೋರಣೆಯಿಂದ ರಾಜ್ಯದ ರೈತರು ಹಾಗೂ ಗ್ರಾಹಕರಿಗೆ ಗಾಯದ ಮೇಲೆ ಬರೆ ಎಳೆದಂತಾಗುತ್ತದೆ.

ಸರ್ಕಾರ ಹೆಚ್ಚಿಸಿರುವ ಎಪಿಎಂಸಿ ಸೆಸ್ ಅನ್ನು ತಕ್ಷಣವೇ ಹಿಂಪಡೆದು ಹಿಂದಿನಂತೆ 0.35 ಶುಲ್ಕವನ್ನು ಮುಂದುವರೆಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ದಲ್ಲಾಲರ ಸಂಘದ ಜಿ.ಎಸ್. ಪರಮೇಶ್ವರಗೌಡ್ರು, ಕರ್ನಾಟಕ ಮೆಕ್ಕೆಜೋಳ ವರ್ತಕರ ಸಂಘದ ಜಿಲ್ಲಾ ಘಟಕದ ಕಾರ್ಯದರ್ಶಿ ಕೆ. ಜಾವೇದ್, ಬಿ.ಎನ್.ಟಿ. ಸದಾನಂದ, ಹೆಚ್. ದಯಾನಂದ, ಕಿರುವಾಡಿ ಸೋಮಶೇಖರ್, ಮಾಗಾನಹಳ್ಳಿ ನಿಜಾನಂದಪ್ಪ, ದೊಗ್ಗಳ್ಳಿ ಬಸವರಾಜ್, ಕಬ್ಬೂರು ಪ್ರಕಾಶ್, ಇಕ್ಬಾಲ್, ಶ್ರೀನಿವಾಸ್ ಸೇರಿದಂತೆ ಇತರರು ಭಾಗವಹಿಸಿದ್ದರು.

**ವಹಿವಾಟು ಸ್ಥಗಿತ:** ಎಪಿಎಂಸಿ ಸೆಸ್ ಹೆಚ್ಚಳದ ವಿರುದ್ಧ ದಲ್ಲಾಳರು, ವರ್ತಕರು ಎಪಿಎಂಸಿಯಲ್ಲಿ ವಹಿವಾಟು ಸ್ಥಗಿತಗೊಳಿಸುವ ಮುಖೇನ ಅಸಮಾಧಾನ ವ್ಯಕ್ತಪಡಿಸಿದ್ದು ಕಂಡು ಬಂತು.

# ಪಂಚಾಯತಿ ಫೈಟ್ - ಸ್ಪರ್ಧಾ ಕಣದಲ್ಲಿ ಜರ್ಮಲಿ ದೊರೆ ಇಮ್ಮಡಿ ಸಿದ್ದಪ್ಪನಾಯಕ

ಕೂಡ್ಲಿಗಿ, ಡಿ.21 - ಅಂದು ರಾಜಪ್ರಭುತ್ವದಲ್ಲಿ ಕೂಡ್ಲಿಗಿ ಸುತ್ತಮುತ್ತಲ ಪ್ರದೇಶದ 133 ಹಳ್ಳಿಗಳ ಜಹಗೀರ್‌ದಾರರಾಗಿ ಪಾಳೆಗಾರಿಕೆ ನಡೆಸಿದ ಜರ್ಮಲಿ ದೊರೆಗಳ ರಾಜವಂಶಸ್ಥರಲ್ಲಿ ಒಬ್ಬರಾಗಿರುವ ಈಗಿನ ಇಮ್ಮಡಿ ಸಿದ್ದಪ್ಪನಾಯಕ ದೊರೆ ಇಂದಿನ ಪ್ರಜಾಪ್ರಭುತ್ವದ ರಾಜಕೀಯ ಅಖಾಡಕ್ಕಿಳಿದು ಜರ್ಮಲಿ ಗ್ರಾಮ ಪಂಚಾಯತಿ ಚುನಾವಣಾ ಅಂತಿಮ ಕಣದ ಅಭ್ಯರ್ಥಿಯಾಗಿದ್ದಾರೆ.

ಚುನಾವಣಾ ರಂಗು ದಿನದಿಂದ ದಿನಕ್ಕೆ ಜೋರಾಗುತ್ತಿದ್ದು ಜರ್ಮಲಿಯ 4 ಸ್ಥಾನಗಳಿಗೆ 11 ಜನ ಸ್ಪರ್ಧಾ ಕಣದಲ್ಲಿದ್ದಾರೆ. ಎಸ್ಟಿ ಮೀಸಲಾತಿ ಸ್ಥಾನಕ್ಕೆ ಈ ಬಾರಿಯ ಜನರ ಒತ್ತಾಸೆಯ ಮೇರೆಗೆ ಕೊನೆ ಘಳಿಗೆಯಲ್ಲಿ ಜರ್ಮಲಿ ಪಾಳೆಗಾರರ ರಾಜವಂಶಸ್ಥ ಇಮ್ಮಡಿ ಸಿದ್ದಪ್ಪ ನಾಯಕ ದೊರೆ ನಾಮಪತ್ರ ಸಲ್ಲಿಸಿದರು. ಇವರ ಅವಿರೋಧ ಆಯ್ಕೆಗೂ ಮುಂದಾದ ಜನತೆ ಪ್ರತಿಸ್ಪರ್ಧಿ ಓಬಳೇಶ್ ಎಂಬ ಆಟೋ ಚಾಲಕ ಇದ್ದಿದ್ದರಿಂದ ಆತನಿಗೆ ನಾಮಪತ್ರ ವಾಪಸ್ ಪಡೆಯುವಂತೆ ಹೇಳಲಾಗಿತ್ತಾದರೂ ಆ ಯುವಕ ಬರುವಷ್ಟರಲ್ಲಿ ಸಮಯದ ನಿಗದಿ ಮೀರಿದ್ದರಿಂದ ನಾಮಪತ್ರ ವಾಪಸ್ ಪಡೆಯಲು ಸಾಧ್ಯವಾಗದಿದ್ದರಿಂದ ಅಂತಿಮ ಕಣದ ಫೈಟ್ ನಡೆಯಲೇಬೇಕಾದ ಅನಿವಾರ್ಯ ಪರಿಸ್ಥಿತಿ ಬಂದೊದಗಿತ್ತು.

**ರಾಜವಂಶಸ್ಥರಿಗೆ ಪ್ರಜಾಪ್ರಭುತ್ವದಲ್ಲೂ ಗೌರವ :** ಯಾರಾದರೂ ಹೆಚ್ಚಿಗೆ ಮಾತನಾಡಿದರೆ ನೀನೇನು ದೊಡ್ಡ ಪಾಳೇಗಾರನೇ ಎಂದು ಮಾತನಾಡುವುದು ಇಲ್ಲಿ ರೂಢಿಯಾಗಿದೆ. ವಿಜಯನಗರ ಕಾಲದಲ್ಲಿ ಸಾಮಂತರಾಗಿದ್ದ ಜರ್ಮಲಿ ಪಾಳೇಗಾರರು 16ನೇ ಶತಮಾನದಲ್ಲಿ ಆಳ್ವಿಕೆ ನಡೆಸಿದ್ದು ರಾಜವೈಭವದಿಂದ ಮೆರೆದವರು. ಆದರೆ ಇಂದು ಅವರ ರಾಜವಂಶ ಸ್ಥರು ಈಗಲೂ ಜರ್ಮಲಿಯಲ್ಲಿ ಜನ ಸಾಮಾನ್ಯರಂತೆ ಜೀವನ ಮಾಡುತ್ತಿದ್ದಾರೆ. ಇಲ್ಲಿನ ಸ್ಥಳೀಯರು ಇವರನ್ನು ಈಗಲೂ ದೊರೆಗಳು ಎಂತಲೇ ಕರೆಯುತ್ತಾರೆ. ಜೊತೆಗೆ ರಾಜರಿಗೆ ಗೌರವ ಈಗಲೂ ನೀಡುತ್ತಾರೆ.



ನಮ್ಮ ಪೂರ್ವಜರು ಈ ಭಾಗದಲ್ಲಿ ರಾಜರಾಗಿ ಆಳ್ವಿಕೆ ನಡೆಸಿದ್ದಾರೆ. ಈಗ ರಾಜಪ್ರಭುತ್ವ ಇಲ್ಲ, ಪ್ರಜಾಪ್ರಭುತ್ವ ಇದೆ ಹೀಗಾಗಿ ಚುನಾವಣೆಯಲ್ಲಿ ಗೆದ್ದವರೇ ಇಲ್ಲಿ ರಾಜರು. ಈಗಾಗಿಯೇ ಸ್ಥಳೀಯ ಜನತೆಯ ಸಹಕಾರದ ಮೇಲೆ ಚುನಾವಣೆಗೆ ಸ್ಪರ್ಧೆ ಮಾಡಿದ್ದು ಸ್ಥಳೀಯ ಜನರು ಮತ ಚಲಾಯಿಸಿ ನನ್ನ ಗೆಲುವಿಗೆ ಶ್ರಮಿಸಲಿದ್ದಾರೆ. ರಾಜವಂಶಸ್ಥರಿಗೆ ಸ್ಥಳೀಯರು ಗೌರವ ನೀಡಲಿದ್ದಾರೆ. ಅದೇ ರೀತಿ ಆ ಗೌರವ ಉಳಿಸಿಕೊಂಡು ಹೋಗುತ್ತೇನೆ ಎಂದರು.

ಗೆಲುವು ಪಡೆದ ನಂತರ ಜರ್ಮಲಿಯ ಐತಿಹಾಸಿಕ ಕುರುಹಾಗಿರುವ ಕೋಟೆ ಕೊತ್ತಲು, ದೇವಸ್ಥಾನಕ್ಕೆ ಬಂದ ಹೋಗುವ ಪ್ರವಾಸಿಗರಿಗೆ, ಜನತೆಗೆ ಉತ್ತಮ ದಾರಿ ಮಾಡುವ ಮೊದಲ ಧ್ಯೇಯ ನನ್ನದಾಗಿದೆ ಎನ್ನುತ್ತಾರೆ ಇಮ್ಮಡಿ ಸಿದ್ದಪ್ಪ ನಾಯಕ.

## ಗ್ರಾ.ಪಂ. ಚುನಾವಣೆ : ಮತದಾನ ಮಾಡಲು ವೇತನ ಸಹಿತ ರಜೆ ಘೋಷಣೆ

ದಾವಣಗೆರೆ, ಡಿ.21 - ನಾಳೆ ದಿನಾಂಕ 22 ಮತ್ತು ಇದೇ ದಿನಾಂಕ 27 ರಂದು ನಡೆಯುವ ಗ್ರಾಮ ಪಂಚಾಯಿತಿ ಸಾರ್ವತ್ರಿಕ ಚುನಾವಣೆಯಲ್ಲಿ ಮತದಾನ ಮಾಡಲು ಸರ್ಕಾರಿ ಹಾಗೂ ಖಾಸಗಿ ಶಾಲಾ-ಕಾಲೇಜುಗಳು, ಅನುದಾನಿತ ಹಾಗೂ ಅನುದಾನ ರಹಿತ ವಿದ್ಯಾಸಂಸ್ಥೆಗಳು, ಎಲ್ಲಾ ಶೈಕ್ಷಣಿಕ ಸಂಸ್ಥೆಗಳು, ರಾಜ್ಯ, ಕೇಂದ್ರ ಸರ್ಕಾರದ ಕಚೇರಿಗಳು, ರಾಷ್ಟ್ರೀಕೃತ ಕೈಗಾರಿಕಾ ಸಂಸ್ಥೆಗಳು ಹಾಗೂ ಸಹಕಾರಿ ರಂಗದ ಸಂಘ ಸಂಸ್ಥೆಗಳಲ್ಲಿ, ಎಲ್ಲಾ ವ್ಯವಹಾರಿಕ ಸಂಸ್ಥೆಗಳಲ್ಲಿ, ಔದ್ಯಮಿಕ ಸಂಸ್ಥೆಗಳಲ್ಲಿ ಮತ್ತು ಇತರೆ ಸಂಸ್ಥೆಗಳಲ್ಲಿ ಖಾಯಂ ಆಗಿ ಅಥವಾ ದಿನಗೂಲಿ ಮೇಲೆ ಕೆಲಸ ನಿರ್ವಹಿಸುತ್ತಿರುವ ಅರ್ಹ ಮತದಾರ ನೌಕರರಿಗೆ ಸೀಮಿತವಾದಂತೆ ವೇತನ ಸಹಿತ ರಜೆಯನ್ನು ಘೋಷಿಸಲಾಗಿದೆ ಎಂದು ಕಾರ್ಮಿಕ ಇಲಾಖೆಯ ಬಳ್ಳಾರಿ ವಿಭಾಗದ ಸಹಾಯಕ ಆಯುಕ್ತರು ತಿಳಿಸಿದ್ದಾರೆ.

# ಸಚಿವರು, ಶಾಸಕರ ವಿರುದ್ಧದ ಪ್ರಕರಣ ಕೈ ಬಿಡುವುದಕ್ಕೆ ಹೈಕೋರ್ಟ್ ತಡೆ

ಬೆಂಗಳೂರು, ಡಿ. 21 – ಸಚಿವರು ಹಾಗೂ ಚುನಾಯಿತ ಜನಪ್ರತಿನಿಧಿಗಳ ವಿರುದ್ಧ ದಾಖಲಿಸಲಾಗಿದ್ದ 61 ಪ್ರಕರಣಗಳನ್ನು ಕೈ ಬಿಡುವ ರಾಜ್ಯ ಸರ್ಕಾರದ ನಿರ್ಧಾರಕ್ಕೆ ಹೈಕೋರ್ಟ್ ತಡೆಯಾಜ್ಞೆ ಹೊರಡಿಸಿದೆ.

ಪ್ರಕರಣಗಳನ್ನು ಕೈ ಬಿಡಲು ಆಗಸ್ಟ್ 31, 2020ರಲ್ಲಿ ಹೊರಡಿಸಲಾದ ಆದೇಶದ ಆಧಾರದ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳಬಾರದು ಎಂದು ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ ಓಕ ಹಾಗೂ ನ್ಯಾಯಮೂರ್ತಿ ವಿಶ್ವಜಿತ್ ಶೆಟ್ಟಿ ಅವರನ್ನು ಒಳಗೊಂಡ ಪೀಠ ಆದೇಶಿಸಿದೆ.

ಈ ಬಗ್ಗೆ ಸರ್ಕಾರ ಜನವರಿ 22ರ ಒಳಗೆ ತನ್ನ ಆಕ್ಷೇಪಗಳನ್ನು ಸಲ್ಲಿಸಬೇಕು ಎಂದು ನ್ಯಾಯಾಲಯ ಹೇಳಿದೆ. ಪ್ರಕರಣಗಳನ್ನು ಕೈ ಬಿಟ್ಟಿರುವುದನ್ನು ಪ್ರಶ್ನಿಸಿ ಸರ್ಕಾರೇತರ ಸಂಘಟನೆಯಾದ ಪೀಪಲ್ಸ್ ಯೂನಿಯನ್ ಆಫ್ ಸಿವಿಲ್ ಲಿಬರ್ಟೀಸ್ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿತ್ತು.

ಸುಪ್ರೀಂ ಕೋರ್ಟ್ ಆದೇಶವನ್ನು ಉಲ್ಲೇಖಿಸಿರುವ ಹೈಕೋರ್ಟ್, ಪಬ್ಲಿಕ್ ಪ್ರಾಸಿಕ್ಯೂಟರ್ ಇಂತಹ ಪ್ರಕರಣಗಳಲ್ಲಿ ಪೋಸ್ಟ್ ಆಫೀಸ್ ರೀತಿಯಲ್ಲಿ ಕಾರ್ಯ ನಿರ್ವಹಿಸಬಾರದು. ಪ್ರಕರಣಗಳನ್ನು ವಾಪಸ್ ಪಡೆಯುವಾಗ ನ್ಯಾಯಾಲಯದ ಅನುಮತಿ ಬೇಕಾಗುತ್ತದೆ ಎಂದು ತಿಳಿಸಿದೆ.

# ಶಾಲಾರಂಭಕ್ಕೆ ಮಾರ್ಗಸೂಚಿ

**(1ನೇ ಪುಟದಿಂದ)** ಸೋಪು, ಸ್ಯಾನಿಟೈಸರ್ ಕಡ್ಡಾಯವಾಗಿ ಬಳಸಬೇಕು ಹಾಗೂ ಉಷ್ಣಾಂಶ ಪರೀಕ್ಷೆಗೆ ಡಿಜಿಟಲ್ ಥರ್ಮಾ ಮೀಟರ್ ಬಳಸಬೇಕು. ಮಕ್ಕಳಿಗೆ ಕುಡಿಯಲು ಬಿಸಿ ನೀರಿನ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ತಿಳಿಸಲಾಗಿದೆ.

ಕೊರೊನಾ ಲಕ್ಷಣ ಕಂಡು ಬಂದ ವಿದ್ಯಾರ್ಥಿ, ಶಿಕ್ಷಕ ಹಾಗೂ ಸಿಬ್ಬಂದಿಯ ನಿರ್ವಹಣೆಗಾಗಿ ಪ್ರತ್ಯೇಕ ಕೊಠಡಿ ಸಿದ್ಧಪಡಿಸಿಕೊಳ್ಳಬೇಕೆಂದು ತಿಳಿಸಲಾಗಿದೆ.

**ಪೋಷಕರ ಕ್ರಮ :** ಕೊರೊನಾ ಸೋಂಕಿನ ಲಕ್ಷಣಗಳಿದ್ದರೆ ಮಗುವನ್ನು ಶಾಲೆಗೆ ಕಳಿಸಬಾರದು. ಮಕ್ಕಳಿಗೆ ಮಾಸ್ಕ್ ಹಾಕಿಯೇ ಶಾಲೆಗೆ ಕಳಿಸಬೇಕು. ಪ್ರತಿದಿನ ಮಾಸ್ಕ್ ಸ್ವಚ್ಛಗೊಳಿಸಬೇಕು. ಅಗತ್ಯವಿರುವಷ್ಟೇ ಪುಸ್ತಕಗಳನ್ನು ಕಳಿಸಬೇಕು. ಪುಸ್ತಕಗಳ ಬ್ಯಾಗಿನ ಜೊತೆಗೆ ಮತ್ತೊಂದು ಬ್ಯಾಗಿನಲ್ಲಿ ಒಂದು ತಟ್ಟೆ, ಟವೆಲ್ ಮತ್ತು ಕಾಯಿಸಿ ಆರಿಸಿದ ನೀರು ಮತ್ತು ಸಾಧ್ಯವಿದ್ದಲ್ಲಿ ಸ್ಯಾನಿಟೈಜರ್ ಬಾಟಲ್ ಕಳಿಸಬೇಕು.

**ಶಿಕ್ಷಕರ ಕ್ರಮ :** ಗೇಟಿನ ಬಳಿ 3 ಅಡಿ ಅಂತರದ ವೃತ್ತ ಮಾಡಿ ವಿದ್ಯಾರ್ಥಿಗಳಲ್ಲಿ ಅಂತರ ಕಾಯ್ದುಕೊಳ್ಳಬೇಕು. ದಟ್ಟಣೆ ತಪ್ಪಿಸುವ ರೀತಿಯಲ್ಲಿ ವಿದ್ಯಾರ್ಥಿಗಳ ಆಗಮನದ ವೇಳಾಪಟ್ಟಿ. ಆಗಮನ - ನಿರ್ಗಮನಕ್ಕೆ ಪ್ರತ್ಯೇಕ ದಾರಿ. ಸಾಮಾಜಿಕ ಅಂತರಕ್ಕಾಗಿ ವಿದ್ಯಾರ್ಥಿ - ಪಾಲಕರಿಗೆ ಸೂಚನೆ, ಧ್ವನಿವರ್ಧಕಗಳ ಬಳಕೆಗೆ ಅವಕಾಶ. ಅಂತರ ಕಾಯ್ದುಕೊಳ್ಳುವಂತೆ ಬೆಂಚ್ ಹಾಕಿಸಬೇಕು.



ಶೌಚಾಲಯ, ಕುಡಿಯುವ ನೀರಿನ ಸೌಲಭ್ಯ, ಗ್ರಂಥಾಲಯ, ಪ್ರಯೋಗಾಲಯ, ಕಂಪ್ಯೂಟರ್ ಲ್ಯಾಬ್, ಒಳಾಂಗಣ ಕ್ರೀಡಾಂಗಣ ಮುಂತಾದ ಕಡೆಗಳಲ್ಲೂ ದೈಹಿಕ ಅಂತರ ಕಾಯ್ದು ಕೊಳ್ಳ ಬೇಕು.

**ಶಾಲಾ ವಾಹನ :** ಶಾಲಾ ಬಸ್‌ನಲ್ಲಿ ಶೇ.50ರಷ್ಟು ಸಾಮರ್ಥ್ಯದ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ ನೀಡಬೇಕು. ಬಸ್ಸನ್ನು ಪ್ರತಿದಿನ ಸ್ಯಾನಿಟೈಜ್ ಮಾಡಬೇಕು. ಚಾಲಕರು ಹಾಗೂ ಸಹಾಯಕರು ಮಾಸ್ಕ್ ಧರಿಸಬೇಕು. ಶಾಲಾ ವಾಹನಗಳ ಕಿಟಕಿ ತೆರೆದಿಟ್ಟು ಮುಕ್ತ ಗಾಳಿ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

**ಸಮುದಾಯದ ಹೊಣೆ :** ಶಾಲಾ ಪ್ರಾರಂಭಕ್ಕೆ ವಾರ ಮುಂಚೆ ಎಸ್‌ಡಿಎಂಸಿ, ಆಡಳಿತ ಮಂಡಳಿ, ಪೋಷಕರ ಸಭೆ ಕರೆದು ಕೊರೊನಾ ಕ್ರಮಗಳ ಕುರಿತು ತಿಳಿಸಬೇಕು. ಎಸ್‌ಡಿಎಂಸಿ ಸದಸ್ಯರ ಮೂಲಕ ವಿದ್ಯಾರ್ಥಿಗಳ ಪಾಲಕರಿಂದ ಅಗತ್ಯ ಸಹಕಾರಕ್ಕೆ ಮನವರಿಕೆ ಮಾಡಲು ಕೋರಬೇಕು. ಶುಚಿತ್ವ -ಸೌಲಭ್ಯಗಳ ನಿರ್ವಹಣೆಗೆ ಸಹಕಾರ ಕೇಳಬೇಕು. ಮಾಸ್ಕ್, ಸ್ಯಾನಿಟೈಜರ್, ಸೋಪ್ ಇತ್ಯಾದಿಗಳಿಗೆ ಅಗತ್ಯವಾದಲ್ಲಿ ಸಮುದಾಯ, ಪಾಲಕರು ಮತ್ತು ದಾನಿಗಳಿಂದ ನೆರವು ಪಡೆದುಕೊಳ್ಳಬೇಕು.

ಇದಲ್ಲದೇ ಪ್ರತಿ ಶಾಲೆಯೂ ಕಾರ್ಯ ನಿರ್ವಹಣೆಗೆ ಅಗತ್ಯವಾಗುವ ರೀತಿಯಲ್ಲಿ ಪ್ರತ್ಯೇಕ ಎಸ್‌ಒಪಿ ರೂಪಿಸಿಕೊಳ್ಳಲೂ ಅವಕಾಶ ನೀಡಲಾಗಿದೆ.


## ಹರಿಹರ ತಾ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಹೆಚ್.ಚಂದ್ರಪ್ಪ



ಹರಿಹರ, ಡಿ.21- ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಹರಿಹರ ತಾಲ್ಲೂಕು ಘಟಕದ ಅಧ್ಯಕ್ಷರಾಗಿ ದೊಗ್ಗಳ್ಳಿ ಸ.ಹಿ.ಪ್ರಾ ಶಾಲೆಯ ಶಿಕ್ಷಕ ಹೆಚ್.ಚಂದ್ರಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರುಗಳಾಗಿ ಬೆಳ್ಳೂಡಿಯ ಸ.ಹಿ.ಪ್ರಾ ಶಾಲೆಯ ಶಿಕ್ಷಕ ಕರಿಬಸಪ್ಪ ಕುಪ್ಪೇಲೂರು, ಮಲೇಬೆನ್ನೂರಿನ ಭೋವಿ ಕಾಲೋನಿಯ ಸ.ಕಿ.ಪ್ರಾ ಶಾಲೆಯ ಶಿಕ್ಷಕಿ ಶ್ರೀಮತಿ ಜ್ಯೋತಿ, ಪ್ರಧಾನ ಕಾರ್ಯದರ್ಶಿಯಾಗಿ ಧೂಳೆಹೊಳೆ ಸ.ಹಿ.ಪ್ರಾ ಶಾಲೆಯ ಶಿಕ್ಷಕಿ ಶ್ರೀಮತಿ ವಿನೋದ, ಸಹ ಕಾರ್ಯದರ್ಶಿಗಳಾಗಿ ಎಕ್ಕೆಗೊಂದಿಯ ಸ.ಹಿ.ಪ್ರಾ ಶಾಲೆಯ ಶಿಕ್ಷಕ ಎಂ.ಹೆಚ್.ನಾಗರಾಜ್, ಹೊಸಪೇಟೆ ಬೀದಿಯ ಸ.ಹಿ.ಪ್ರಾ ಶಾಲೆಯ ಶಿಕ್ಷಕಿ ಶ್ರೀಮತಿ ಮಮತಾ, ಸಂಘಟನಾ ಕಾರ್ಯದರ್ಶಿಗಳಾಗಿ ನಂದಿಗಾವಿಯ ಸ.ಹಿ.ಪ್ರಾ ಶಾಲೆಯ ಶಿಕ್ಷಕ ಕೆ.ಎಂ.ರುದ್ರಪ್ಪ, ಭಾನುವಳ್ಳಿ ಸ.ಹಿ.ಪ್ರಾ ಶಾಲೆಯ ಶಿಕ್ಷಕಿ ಶ್ರೀಮತಿ ಸುಮಂಗಲಾ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಬಿ.ಬಿ.ರೇವಣನಾಯ್ಕ ಘೋಷಿಸಿದ್ದಾರೆ.

## ರಾಣೇಬೆನ್ನೂರು : ಮತಗಟ್ಟೆಯತ್ತ ಚುನಾವಣಾ ಸಿಬ್ಬಂದಿ



ರಾಣೇಬೆನ್ನೂರು, ಡಿ.21- ಗ್ರಾಮ ಪಂಚಾಯ್ತಿಯ ಮೊದಲ ಹಂತದ ಚುನಾವಣಾ ಕಾರ್ಯಕ್ಕಾಗಿ ಸಿಬ್ಬಂದಿಗಳು ಇಲ್ಲಿನ ರೋಟರಿ ಶಾಲೆಯಿಂದ ಸಲಕರಣೆಗಳೊಂದಿಗೆ ಮತಗಟ್ಟೆಗಳಿಗೆ ತೆರಳಿದರು.

ತಾಲ್ಲೂಕಿನಲ್ಲಿರುವ 33 ಗ್ರಾ.ಪಂ.ಗಳಲ್ಲಿ 236 ಸ್ಥಾನಗಳಿದ್ದು, ಈಗಾಗಲೇ 7 ಸದಸ್ಯರ ಅವಿರೋಧ ಆಯ್ಕೆ ನಡೆದಿದೆ. ಉಳಿದ 229 ಸ್ಥಾನಗಳಿಗೆ 80,768 ಪುರುಷರು 76,389 ಮಹಿಳೆಯರು ಹಾಗೂ ಇತರರು 7 ಸೇರಿದಂತೆ ಒಟ್ಟು 15,7164 ಮತದಾರರು ಮತ ಚಲಾಯಿಸಲಿದ್ದಾರೆ.

ತಾಲ್ಲೂಕಿನಲ್ಲಿ 44 ಕ್ರಿಟಿಕಲ್, 115 ನಾನ್ ಕ್ರಿಟಿಕಲ್ ಮತಗಟ್ಟೆಗಳಿದ್ದು, ಪ್ರತಿ ಮತಗಟ್ಟೆಗೆ ಚುನಾವಣಾಧಿಕಾರಿ ಹಾಗೂ ಸಹಾಯಕರು ಸೇರಿದಂತೆ ನಾಲ್ವರನ್ನು ನೇಮಿಸಲಾಗಿದೆ. ಅವರಲ್ಲಿ ಇಬ್ಬರು ಮಹಿಳೆಯರ ನೇಮಕ ಕಡ್ಡಾಯವಾಗಿದೆ.

ಮತದಾನ ಶಾಂತಿಯುತವಾಗಿ ನಡೆಸಲು ಭದ್ರತೆಗಾಗಿ ಒಂದು ಕೆಎಸ್‌ಆರ್ ಪಿ ತುಕಡಿ, 2 ಜಿಲ್ಲಾ ರಿಜರ್ವ್ ತುಕಡಿ, ಒಬ್ಬರು ಡಿವೈಎಸ್‌ಪಿ, ಮೂವರು ಸಿಪಿಐಗಳು, 26 ಪಿಎಸ್‌ಐಗಳು, 61 ಹೆಚ್‌ಸಿ, 142 ಪಿಸಿಗಳು ಹಾಗೂ 55 ಗೃಹರಕ್ಷಕರನ್ನು ನೇಮಿಸಲಾಗಿದೆ. ಇದೇ ಪ್ರಥಮ ಬಾರಿಗೆ 30 ವಾರ್ಡ್‌ಗಳನ್ನು ಚುನಾವಣಾ ಕಾರ್ಯಕ್ಕಾಗಿ ತೆಗೆದುಕೊಳ್ಳಲಾಗಿದೆ.

## 2ಎ ಮೀಸಲಾತಿಗಾಗಿ ಆಗ್ರಹಿಸಿ ನಗರದಲ್ಲಿ ನಾಳೆ ರಕ್ತ ದಾಸೋಹ

ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿಗಳ ಹುಟ್ಟುಹಬ್ಬದ ಅಂಗವಾಗಿ ಮತ್ತು ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡುವಂತೆ ಆಗ್ರಹಿಸಿ, ನಾಳೆ ದಿನಾಂಕ 23 ರಂದು ರಾಜ್ಯಾದ್ಯಂತ 'ಕೊಡುತ್ತೇವೆ ರಕ್ತವನ್ನು, ಪಡೆಯುತ್ತೇವೆ ಮೀಸಲಾತಿಯನ್ನು' ಎಂಬ ರಕ್ತ ದಾಸೋಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಇಂದು ಬೆಳಿಗ್ಗೆ 10 ಗಂಟೆಗೆ ಶ್ರೀ ಡಾ. ಸದ್ಯೋಜಾತ ಶಿವಾಚಾರ್ಯ ಹಿರೇಮಠದಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುತ್ತದೆ.

ಕೊರೊನಾ ಸೋಂಕು, ಅತಿವೃಷ್ಠಿ, ಬೆಳೆ ನಷ್ಟದಿಂದ ಜೀವ ಸಂಕುಲ ಸಂಕಷ್ಟದಲ್ಲಿರುವ ಕಾರಣ ರಕ್ತ ದಾಸೋಹ ಕಾರ್ಯಕ್ರಮದಲ್ಲಿ ಸಮಾಜ ಬಾಂಧವರು ಸ್ಥಳೀಯ ಆಸ್ಪತ್ರೆಗಳಲ್ಲಿ ರಕ್ತ ಕೊಟ್ಟು, ಹೋರಾಟದ ಕಿಚ್ಚು ವ್ಯಕ್ತಪಡಿಸುವಂತೆ ಪ್ರಭು ಕಲ್ಬುರ್ಗಿ (8722209719), ಮಹಾಂತೇಶ್ ಒಣರೊಟ್ಟಿ (7353674904) ಅವರು ಕರೆ ನೀಡಿದ್ದಾರೆ.

|| ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು ||
ಸ್ಥಾಪನೆ : 1996
**ಶ್ರೀ ವೀರಮಾಹೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**
ಡೋ. ನಂ. 683/2, 8ನೇ ಮುಖ್ಯ ರಸ್ತೆ, ಪಿ. ಜೆ. ಬಡಾವಣೆ, ದಾವಣಗೆರೆ. ಫೋ. : 239693

**2019-20ನೇ ಸಾಲಿನ 24ನೇ ಸರ್ವ ಸದಸ್ಯರ ಸಭೆ**

ಶ್ರೀ ವೀರಮಾಹೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ದಾವಣಗೆರೆ ಇದರ **2019-20ನೇ ಸಾಲಿನ 24ನೇ ಸರ್ವ ಸದಸ್ಯರ ಸಭೆ**ಯನ್ನು ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಸರ್ಕಾರದ ಆದೇಶದಂತೆ **ವರ್ಚ್ಯುವಲ್ ಮೀಟಿಂಗ್ ಮುಖಾಂತರ ಸರ್ವಸದಸ್ಯರ ಸಭೆಯನ್ನು ದಿನಾಂಕ 23.12.2020ನೇ ಬುಧವಾರ ಬೆಳಿಗ್ಗೆ 11 ಗಂಟೆಗೆ ನಡೆಸಲು ನಿರ್ಣಯಿಸಲಾಗಿದೆ.**

ಸದಸ್ಯರು ಭಾಗವಹಿಸಲು **https://iroot.in/svm**
ನೇರವಾಗಿ ಲಾಗಿನ್ ಆಗಬಹುದು.
ಅಥವಾ
you are invited to attend video conference at ihost.livescheduled on
Dec. 23-2020 - 11 : 00 am
Kindly Online video Conference
https:/ihost.live/m/gj8guz
Login with your mobile No. Password is : 123456
ಇದರ ಮೂಲಕವು ಲಾಗಿನ್ ಆಗಬಹುದು.
ಸೊಸೈಟಿಯ ಸರ್ವಸದಸ್ಯರು ತಪ್ಪದೇ ಭಾಗವಹಿಸಿ ಸಹಕಾರ ನೀಡಬೇಕೆಂದು ಕೋರಿದೆ.

ತ್ಯಾವಣಗಿ ವೀರಭದ್ರಸ್ವಾಮಿ, ಅಧ್ಯಕ್ಷರು    ಜಿ.ಎಂ. ನಂದೀಶ್, ಕಾರ್ಯದರ್ಶಿ

**ಮೃಗಶಿರಾ ಪೂರ್ಣಿಮಾ ಔಷಧಿ ಪ್ರಾಶನ**
**ಕೆಮ್ಮು, ನೆಗಡಿ, ದಮ್ಮು, ಅಸ್ತಮಾ ವಿಶೇಷ ಚಿಕಿತ್ಸಾ ಶಿಬಿರ**
ದಿನಾಂಕ 30.12.2020, ಬುಧವಾರ (ಮೃಗಶಿರಾ ಪೂರ್ಣಿಮಾ)
ಸಮಯ : ಬೆಳಿಗ್ಗೆ 6 ರಿಂದ 7 ಗಂಟೆಯವರೆಗೆ
✦ ಈ ಅನುಭೂತ ಆಯುರ್ವೇದ ಔಷಧಿಯನ್ನು ಐದು ವರ್ಷ ಮೇಲ್ಪಟ್ಟವರಿಗೆ ಮಾತ್ರ ನೀಡಲಾಗುವುದು. ✦ ಮೊದಲ 200 ಜನರಿಗೆ ಮಾತ್ರ.
✦ ಆಸಕ್ತರು 22.12.2020ರಿಂದ 28.12.2020ರವರೆಗೆ ಆಸ್ಪತ್ರೆಗೆ ಭೇಟಿ ನೀಡಿ, ವೈದ್ಯರ ಸಲಹೆ ತೆಗೆದುಕೊಂಡು ಕೂಪನ್ ಪಡೆದುಕೊಳ್ಳಬೇಕು. (ಒಂದು ಕೂಪನ್ - 100 ರೂ.)
✦ ಔಷಧಿ ಸೇವಿಸುವವರು ದಿನಾಂಕ 30.12.2020ರಂದು ಖಾಲಿ ಹೊಟ್ಟೆಯಲ್ಲಿ ಸ್ನಾನ ಮಾಡಿಕೊಂಡು ಬರಬೇಕು.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
ANVAYA **ಅನ್ವಯ ಆಯುರ್ವೇದ ಆಸ್ಪತ್ರೆ**
#1981, 10ನೇ ಕ್ರಾಸ್, ಆಶ್ರಯ ಆಸ್ಪತ್ರೆ ಹಿಂಭಾಗ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ.
ಫೋ. : 08192-252228, ಮೊ. : 8618642929

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
ದಾವಣಗೆರೆ ವಿಭಾಗ, ದಾವಣಗೆರೆ.
ಸಂಖ್ಯೆ: ಕರಾಸಾ/ದಾವಿ/ಸಂ/ವಾ/1621/2020-21    ದಿನಾಂಕ: 21-12-2020
ಇ-ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)
ಕ.ರಾ.ರ.ಸಾ. ನಿಗಮದ ವ್ಯಾಪ್ತಿಯಲ್ಲಿರುವ ದಾವಣಗೆರೆ ವಿಭಾಗದ ವ್ಯಾಪ್ತಿಗೆ ಒಳಪಡುವ **04 (ತಾತ್ಕಾಲಿಕ ದಾವಣಗೆರೆ ಬಸ್ ನಿಲ್ದಾಣ, ಜಗಳೂರು, ಹರಿಹರ ಮತ್ತು ಮಲೇಬೆನ್ನೂರು ಬಸ್ ನಿಲ್ದಾಣ)** ಬಸ್ ನಿಲ್ದಾಣಗಳ ಸ್ವಚ್ಛತಾ ನಿರ್ವಹಣೆ ಕಾರ್ಯದ ಗುತ್ತಿಗೆಯನ್ನು ಯಾಂತ್ರೀಕೃತ / ಯಾಂತ್ರೀಕೃತ ರಹಿತ ಹೌಸ್ ಕೀಪಿಂಗ್ ಪದ್ಧತಿಗನುಗುಣವಾಗಿ ನಿರ್ವಹಿಸಲು ಅರ್ಹ ಸ್ವಚ್ಛತಾ ಗುತ್ತಿಗೆದಾರರಿಂದ ಅರ್ಜಿಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾಗಿದೆ.

| ವಿವರಗಳು | ದಿನಾಂಕ | ಸಮಯ |
|---|---|---|
| ಬಿಡ್ ಸಲ್ಲಿಸಲು ಪ್ರಾರಂಭಿಕ ದಿನಾಂಕ | 21-12-2020 | - |
| ಬಿಡ್ ಸಲ್ಲಿಸಲು ಕೊನೆಯ ದಿನಾಂಕ | 11-01-2021 | 17.00 |
| ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ | 13-01-2021 | 11.00 |
| ಆರ್ಥಿಕ ಬಿಡ್ ತೆರೆಯುವ ದಿನಾಂಕ | 20-01-2021 | 11.00 |


ಹೆಚ್ಚಿನ ಮಾಹಿತಿಗಾಗಿ/ ವಿವರಗಳಿಗಾಗಿ ಸಂಪರ್ಕಿಸುವ ದೂರವಾಣಿ ಸಂಖ್ಯೆ: ವಿಭಾಗೀಯ ಸಂಚಾರ ಅಧಿಕಾರಿ – **7760990452**, ಸಹಾಯಕ ಸಂಚಾರ ವ್ಯವಸ್ಥಾಪಕರು – **7760990461**.
ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ.
DIPR/DDU/Adverto/2119/2020-21
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**ಕೊಟ್ಟೂರು ಕಾರ್ತಿಕ : ವಿಶೇಷ ಹೂವಿನಾಲಂಕಾರ**

ಕೊಟ್ಟೂರು, ಡಿ.21- ಇದೇ ದಿನಾಂಕ 28 ರಂದು ನಡೆಯಲಿರುವ ಶ್ರೀ ಗುರು ಬಸವೇಶ್ವರ ಸ್ವಾಮಿಯ ಕಾರ್ತಿಕೋತ್ಸವದ ಅಂಗವಾಗಿ ಭಕ್ತರೊಬ್ಬರು ಸ್ವಾಮಿಗೆ ಇಂದು ವಿಶೇಷ ಹೂವಿನ ಅಲಂಕಾರ ಸೇವೆ ಸಲ್ಲಿಸಿದರು.

## ಗೃಹಿಣಿಯರಿಗೆ ವೇತನ ನೀಡಲು ಕಮಲ್ ಹಾಸನ್ ಭರವಸೆ



ಕಾಂಚೀಪುರಂ (ತಮಿಳು ನಾಡು), ಡಿ. 21 – ತಮ್ಮ ಎಂ.ಎನ್.ಎಂ. ಪಕ್ಷ ತಮಿಳುನಾಡಿನಲ್ಲಿ ಅಧಿಕಾರಕ್ಕೆ ಬಂದರೆ ಗೃಹಿಣಿಯರಿಗೆ ವೇತನ, ಎಲ್ಲಾ ಮನೆಗಳಿಗೆ ಉನ್ನತ ವೇಗದ ಉಚಿತ ಇಂಟರ್‌ನೆಟ್ ಒದಗಿಸುವುದಾಗಿ ನಟ ಹಾಗೂ ರಾಜಕಾರಣಿ ಕಮಲ್ ಹಾಸನ್ ಭರವಸೆ ನೀಡಿದ್ದಾರೆ.

ಪಕ್ಷದ ಏಳು ಅಂಶಗಳ ಆಡಳಿತ ಹಾಗೂ ಆರ್ಥಿಕ ಅಜೆಂಡಾ ಬಿಡುಗಡೆ ಮಾಡಿರುವ ಅವರು, ಬಡತನ ರೇಖೆಗಿಂತ ಕೆಳಗಿರುವ ವರನ್ನು ಸಮೃದ್ಧಿಯ ರೇಖೆಗೆ ತೆಗೆದುಕೊಂಡು ಹೋಗುವುದಾಗಿ ಹೇಳಿದ್ದಾರೆ.

ಗೃಹಿಣಿಯರಿಗೆ ವೇತನದ ಮೂಲಕ ಅವರ ಮನೆಕೆಲಸಕ್ಕೆ ಸೂಕ್ತ ಗೌರವ ಸಲ್ಲಿಸಲಾಗುವುದು. ಇದುವರೆಗೂ ಅವರ ಕೆಲಸಗಳು ಮಾನ್ಯತೆ ಪಡೆದಿಲ್ಲ ಹಾಗೂ ನಗದೀಕರಣವಾಗಿಲ್ಲ ಎಂದು ಕಮಲ್ ಹಾಸನ್ ತಿಳಿಸಿದ್ದಾರೆ.

# ಅಂಗಾಂಗ ದಾನ ಉತ್ತೇಜನಕ್ಕೆ 'ಸೊಟ್ಟೊ'

ಬೆಂಗಳೂರು, ಡಿ.21 - ಅಂಗಾಂಗ ದಾನವನ್ನು ಉತ್ತೇಜಿಸಲು ಜೀವಸಾರ್ಥಕತೆ ಕಾರ್ಯಕ್ರಮವನ್ನು ಕರ್ನಾಟಕದ ಸೊಟ್ಟೊ (ಸ್ಟೇಟ್ ಆರ್ಗನ್ ಟಿಶ್ಯೂ ಟ್ರಾನ್ಸ್‌ಪ್ಲಾಂಟ್ ಆರ್ಗನೈಜೇಷನ್) ಎಂದು ಗುರುತಿಸಲು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಅಂಗಾಂಗ ಕಸಿ ಕಾರ್ಯಕ್ರಮದ ಪ್ರಚಾರಕ್ಕೆ ಸಂಬಂಧಿಸಿದಂತೆ ಜೀವಸಾರ್ಥಕತೆಯ ಪ್ರಮುಖರೊಂದಿಗೆ ಸಭೆ ನಡೆಯಿತು.

ಕೊರೊನಾ ಪ್ರಕರಣಗಳ ಇಳಿಕೆಯೊಂದಿಗೆ ದಾನಿಗಳ ಸಂಖ್ಯೆ ಹೆಚ್ಚುತ್ತಿದೆ. 2019ರಲ್ಲಿ 105 ಅಂಗಾಂಗ ದಾನಿಗಳಿದ್ದರು. 2020 ರಲ್ಲಿ ಪೂರ್ವ ಕೋವಿಡ್ ಸಮಯದಲ್ಲಿ ಅಂದರೆ ಜನವರಿಯಿಂದ ಮಾರ್ಚ್ ವರೆಗೆ 25 ಹಾಗೂ ಕಳೆದ ಎರಡು ತಿಂಗಳಲ್ಲಿ 9 ಅಂಗಾಂಗ ಕಸಿ ನಡೆದಿದೆ.

ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ವಿಶ್ವವಿದ್ಯಾಲಯವು ಜೀವಸಾರ್ಥಕತೆಯ ಬಗ್ಗೆ ವರದಿ ನೀಡಿ, ಕರ್ನಾಟಕದ ಸೊಟ್ಟೊ ಎಂದು ಗುರುತಿಸಬೇಕೆಂದು ಶಿಫಾರಸು ಮಾಡಿದ್ದು, ಇದನ್ನು ಜಾರಿ ಮಾಡಲು ನಿರ್ಧರಿಸಲಾಗಿದೆ.

ರಾಜ್ಯದ ಎಲ್ಲ ಜಿಲ್ಲಾಸ್ಪತ್ರೆ, ವೈದ್ಯಕೀಯ ಕಾಲೇಜುಗಳಿಗೆ ಅಂಗಾಂಗ ಮರುಪಡೆ ಯುವಿಕೆಗೆ ಪರವಾನಗಿ ನೀಡಲಾಗುವುದು. ಇದಕ್ಕೆ ಮಾರ್ಗದರ್ಶನ ನೀಡಲು ಉನ್ನತ ಮಟ್ಟದ ಸಲಹಾ ಸಮಿತಿ ರಚಿಸಲಾಗುತ್ತದೆ.

ಹೊಸದಾಗಿ ಉಪನಿರ್ದೇಶಕರು, ಕಚೇರಿ ಪೋಷಕ ಸಿಬ್ಬಂದಿ ಮತ್ತು 20 ಅಂಗಾಂಗ ಕಸಿ ಸಂಯೋಜಕರನ್ನು ನೇಮಿಸಲಾಗುವುದು. ಇದಕ್ಕಾಗಿ ಸಿಬ್ಬಂದಿಗೆ ತರಬೇತಿ ನೀಡಲಾಗುವುದು. ಕಸಿ ಕುರಿತು ಜಾಗೃತಿಗೆ ರಾಜ್ಯಾದ್ಯಂತ ಅಭಿಯಾನ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

## ಡಿ.ಇಎಲ್. ಇಡಿ / ಡಿ.ಪಿ.ಇಡಿ ಕೋರ್ಸಿಗೆ ಅವಕಾಶ

ದಾವಣಗೆರೆ, ಡಿ.21- 2020-21ನೇ ಸಾಲಿನಲ್ಲಿ ಡಿ.ಇ.ಎಲ್.ಇಡಿ/ಡಿ.ಪಿ.ಇಡಿ ಕೋರ್ಸಿಗೆ ಸರ್ಕಾರಿ ಕೋಟಾದಡಿ ಭರ್ತಿಯಾಗದೇ ಉಳಿದಿರುವ ಸೀಟುಗಳನ್ನು ಆಡಳಿತ ಮಂಡಳಿ ಕೋಟಾದಡಿ ಭರ್ತಿ ಮಾಡಿಕೊಳ್ಳಲು ಎನ್.ಸಿ.ಟಿ.ಇ ಮಾನ್ಯತೆ ಪಡೆದಿರುವ ಖಾಸಗಿ ಡಿ.ಇ.ಎಲ್.ಇಡಿ/ ಡಿ.ಪಿ.ಇಡಿ ಕಾಲೇಜುಗಳಿಗೆ ಅನುಮತಿ ನೀಡಲಾಗಿದೆ. ದಾಖಲಾತಿ ಬಯಸುವ ಆಸಕ್ತ ಅಭ್ಯರ್ಥಿಗಳು ಇದೇ ದಿನಾಂಕ 28 ರೊಳಗಾಗಿ ಎನ್.ಸಿ.ಟಿ.ಇ ಮಾನ್ಯತೆ ಪಡೆದಿರುವ ಡಿ.ಇ.ಎಲ್.ಇಡಿ/ಡಿ.ಪಿ.ಇಡಿ/ ಕಾಲೇಜುಗಳಲ್ಲಿ ದಾಖಲಾತಿ ಪಡೆಯಬಹುದೆಂದು ಡಯಟ್‌ನ ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು ತಿಳಿಸಿದ್ದಾರೆ.

## ಕಸಾಪದಿಂದ ಡಾ. ಎಂ.ಜಿ. ಈಶ್ವರಪ್ಪಗೆ ಸನ್ಮಾನ



ದಾವಣಗೆರೆ, ಡಿ.21- ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರಾಗಿರುವ ಜಾನಪದ ವಿದ್ವಾಂಸ ಡಾ. ಎಂ.ಜಿ.ಈಶ್ವರಪ್ಪ ಅವರನ್ನು ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್‌ನಿಂದ ಅಭಿನಂದಿಸಿ, ಗೌರವಿಸಿ, ಸನ್ಮಾನಿಸಲಾಯಿತು.

ನಗರದ ಕುವೆಂಪು ಕನ್ನಡ ಭವನದ ಕಚೇರಿ ಆವರಣದಲ್ಲಿ ಕಳೆದ ವಾರ ನಡೆದ ಸರಳ ಸಮಾರಂಭದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕದಿಂದ ಪ್ರಶಸ್ತಿ ಪುರಸ್ಕೃತರಾದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ, ಜಿಲ್ಲಾಡಳಿತದಿಂದ ಪ್ರಶಸ್ತಿ ಪುರಸ್ಕೃತರಾದ ಕಸಾಪ ಜಿಲ್ಲಾ ಸಮಿತಿ ನಿಕಟ ಪೂರ್ವ ಅಧ್ಯಕ್ಷ ಎ.ಆರ್.ಉಜ್ಜನಪ್ಪ, ಗಾಯಕಿ ಶ್ರೀಮತಿ ರುದ್ರಾಕ್ಷಿಬಾಯಿ ಅವರನ್ನೂ ಅಭಿನಂದಿಸಲಾಯಿತು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸರಳ ಸಮಾರಂಭದಲ್ಲಿ ಕಸಾಪ ಮಾಜಿ ಜಿಲ್ಲಾಧ್ಯಕ್ಷ ಸದಾಶಿವಪ್ಪ ಶ್ಯಾಗಲೆ, ತಾಲ್ಲೂಕು ಕಸಾಪ ಗೌರವ ಕಾರ್ಯದರ್ಶಿ ಸಾಲಿಗ್ರಾಮ ಗಣೇಶ್ ಶೆಣೈ, ಇ.ಎಂ. ಮಂಜುನಾಥ, ಕಚೇರಿ ಕಾರ್ಯದರ್ಶಿ ಮುರುಗಯ್ಯ ಕುರ್ಕಿ, ನಿರ್ದೇಶಕರುಗಳಾದ ರಾಘವೇಂದ್ರ ನಾಯಿರಿ, ಎಂ.ಷಡಾಕ್ಷರಪ್ಪ, ಜಗದೀಶ್ ಕೂಲಂಬಿ, ಜೆ.ಸಿ. ಜೀವನ್ ಕೂಲಂಬಿ ಮತ್ತಿತರರು ಉಪಸ್ಥಿತರಿದ್ದರು.

## ಕಾಂಗ್ರೆಸ್ ಹಿರಿಯ ನಾಯಕ ಮೋತಿಲಾಲ್ ವೋರಾ ನಿಧನ

ನವದೆಹಲಿ, ಡಿ. 21 – ಕಾಂಗ್ರೆಸ್ ಹಿರಿಯ ನಾಯಕ ಮೋತಿಲಾಲ್ ವೋರಾ ಸೋಮವಾರ ನಿಧನರಾಗಿದ್ದಾರೆ. ಕೊರೊನಾ ಸೋಂಕಿನ ನಂತರ ಉಂಟಾಗಿದ್ದ ಅನಾರೋಗ್ಯದಿಂದಾಗಿ ಅವರು ಆಸ್ಪತ್ರೆಗೆ ದಾಖಲಾಗಿದ್ದರು.

## ಕಚೇರಿಯಲ್ಲೇ ಸಮಾಜ ಕಲ್ಯಾಣ ಇಲಾಖೆ ವ್ಯವಸ್ಥಾಪಕ ಆತ್ಮಹತ್ಯೆ



ದಾವಣಗೆರೆ, ಡಿ.21- ಸಮಾಜ ಕಲ್ಯಾಣ ಇಲಾಖೆಯ ವ್ಯವಸ್ಥಾಪಕ ತಮ್ಮ ಇಲಾಖೆಯ ಕಚೇರಿಯಲ್ಲೇ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿನ ಸಮಾಜ ಕಲ್ಯಾಣ ಇಲಾಖೆಯ ಪತ್ರಾಂಕಿತ ವ್ಯವಸ್ಥಾಪಕರಾದ ಎಂ.ಆರ್. ಶಿವಕುಮಾರ್ (49) ಆತ್ಮಹತ್ಯೆ ಮಾಡಿಕೊಂಡ ಅಧಿಕಾರಿ.

ಮೂಲತಃ ದಾವಣಗೆರೆ ತಾಲ್ಲೂಕಿನ ಮಳಲ್ಕೆರೆ ಗ್ರಾಮದವರಾದ ಶಿವಕುಮಾರ್, ಕಳೆದ ನವೆಂಬರ್ 21ರಿಂದ ಡಿಸೆಂಬರ್ 11ರವರೆಗೆ ರಜೆಯಲ್ಲಿದ್ದರು. ಭಾನುವಾರ ರಜಾ ದಿನವಾಗಿದ್ದರೂ ಮಧ್ಯಾಹ್ನ 12.30ರ ವೇಳೆ ಮನೆಯಿಂದ ಕಚೇರಿಗೆ ಬಂದು ಅಲ್ಲಿನ ಸೀಲಿಂಗ್ ಫ್ಯಾನ್‌ಗೆ ಪ್ಲಾಸ್ಟಿಕ್ ಹಗ್ಗದಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಂದು ಬೆಳಿಗ್ಗೆ ಇಲಾಖೆ ಸಿಬ್ಬಂದಿ ಕಚೇರಿ ಬಾಗಿಲು ತೆಗೆದಾಗ ಶಿವಕುಮಾರ್ ಆತ್ಮಹತ್ಯೆ ಬೆಳಕಿಗೆ ಬಂದಿದೆ. ಆರ್ಥಿಕವಾಗಿ ಸ್ಥಿತಿವಂತರಾಗಿದ್ದ ಶಿವಕುಮಾರ್ ಕುಟುಂಬವು ಸಾಮರಸ್ಯದಿಂದ ಇದ್ದು, ಮನೆಯಲ್ಲೂ ಯಾವುದೇ ಸಮಸ್ಯೆ ಇರಲಿಲ್ಲ. ದೊಡ್ಡಬಾತಿ ಗ್ರಾಮದ ತಪೋವನದಲ್ಲಿ ಕಳೆದ ವಾರವಷ್ಟೇ ಮಾನಸಿಕ ಖಿನ್ನತೆ ಹಿನ್ನೆಲೆಯಲ್ಲಿ ಚಿಕಿತ್ಸೆ ಪಡೆದಿದ್ದರು ಎನ್ನಲಾಗಿದೆ. ಆದರೆ, ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ.

## ನಗರದಲ್ಲಿ ಇಂದು ಕಾನೂನು ಅರಿವು

ಕಾನೂನು ಸೇವಾ ಪ್ರಾಧಿಕಾರದ ಕಚೇರಿಯಲ್ಲಿ 'ಮಹಿಳೆಯರಿಗೆ ಸಂಬಂಧಿಸಿದ ಕಾನೂನು ಗಳು' ಕೈಪಿಡಿ ಬಿಡುಗಡೆ ಕಾರ್ಯಕ್ರಮ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ. ಉದ್ಘಾಟನೆ : ಸಾಬಪ್ಪ. ಅಧ್ಯಕ್ಷತೆ : ಎನ್. ಟಿ.ಮಂಜುನಾಥ. ಅತಿಥಿಗಳು : ಜಬೀನಾ ಖಾನಂ, ರೇಣುಕಾ ಯಲ್ಲಮ್ಮ, ಎಲ್.ಹೆಚ್. ಅರುಣಕುಮಾರ್.

## ನಾಳೆ ಜಿ.ಪಂ. ಅಧ್ಯಕ್ಷರ ಚುನಾವಣೆ

ದಾವಣಗೆರೆ ಡಿ.21- ದಾವಣಗೆರೆ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರ ಸ್ಥಾನಕ್ಕೆ ನಾಡಿದ್ದು ದಿನಾಂಕ 23 ರ ಬುಧವಾರ ಮಧ್ಯಾಹ್ನ 3 ಗಂಟೆಗೆ ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ಚುನಾವಣೆ ನಡೆಯಲಿದೆ. ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ ಎಂದು ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತ ನವೀನ್ ರಾಜ್ ಸಿಂಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




**ಶ್ರೀ ಗಾಯತ್ರಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ**

1ನೇ ಮೇನ್, 1ನೇ ಕ್ರಾಸ್
ಜೆ.ಸಿ. ಬಡಾವಣೆ, ಹರಿಹರ.



**21ನೇ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ**

ದಿನಾಂಕ : 24.12.2020ನೇ ಗುರುವಾರ, ಸ್ಥಳ : ಸಹಕಾರಿಯ ಆವರಣದಲ್ಲಿ

**ವಿಶೇಷ ಸೂಚನೆ :**

1) ವಾರ್ಷಿಕ ಮಹಾಸಭೆಗೆ ಬರುವಾಗ ಎಲ್ಲಾ ಸದಸ್ಯರು ತಪ್ಪದೇ ವಾರ್ಷಿಕ ವರದಿಯನ್ನು ತರಬೇಕಾಗಿ ಕೋರಿದೆ.

2) ಕೋವಿಡ್-19 ಇರುವುದರ ಪ್ರಯುಕ್ತ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಾರ್ಗಸೂಚಿ ಅನ್ವಯ, ಮಾಸ್ಕ್ ಧರಿಸುವುದು ಹಾಗೂ ಸಾಮಾಜಿಕ ಅಂತರ ಪಾಲಿಸುವುದು, ಸ್ಯಾನಿಟೈಜರ್ ಬಳಸುವುದನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

3) ಮಾನ್ಯ ಸದಸ್ಯರುಗಳಿಗೆ ಈಗಾಗಲೇ ಮಹಾಸಭೆಯ ನೋಟಿಸುಗಳನ್ನು ಕಳಿಹಿಸಲಾಗಿದ್ದು, ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ವಿನಂತಿಸಿದೆ.

| ಶರದ್ ಕೆ. ಕೊಣ್ಣೂರ್ | ಹೆಚ್.ಎಂ. ದಿನೇಶ್ | ಗುರುದತ್ತ ನಾಡಿಗರ್ |
|---|---|---|
| ಅಧ್ಯಕ್ಷರು | ಉಪಾಧ್ಯಕ್ಷರು | ವ್ಯವಸ್ಥಾಪಕರು |



॥ಶ್ರೀ ಬೊಮ್ಮಲಿಂಗೇಶ್ವರ ಪ್ರಸನ್ನ॥

# ಕೈಲಾಸ ಸಮಾರಾಧನೆಯ ಆಹ್ವಾನ ಪತ್ರಿಕೆ



ಬಳ್ಳಾರಿ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು ಕಾವಲಹಳ್ಳಿ ಗ್ರಾಮದ ವಾಸಿ
ಲಿಂ॥ ಕೆ.ನಿಂಗಪ್ಪ, ಲಿಂ॥ ಕೆ ಮಹದೇವಪ್ಪ ಲಿಂ॥ ಕೆ.ಗುರುಸಿದ್ದಪ್ಪ ಮತ್ತು ಲಿಂ॥ ಕೆ. ಚನ್ನಬಸಪ್ಪ, ಇವರ ಮಗನಾದ
ಶ್ರೀ ಕೆ. ರವೀಂದ್ರನಾಥ್ ಮತ್ತು ಸಹೋದರರು ಮಾಡುವ ವಿಜ್ಞಾಪನೆಗಳು.
ಇವರು ದಿನಾಂಕ 14.12.2020 ರ ಸೋಮವಾರ ಸಂಜೆ 4.00 ಗಂಟೆಗೆ
ಶ್ರೀಮತಿ ಜಾನಮ್ಮನವರ ಪೂಜ್ಯ ಪತಿಯವರಾದ

**ಶ್ರೀ ಕೆ. ಸಿದ್ದಲಿಂಗಪ್ಪನವರು**

ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಸಮಾರಾಧನೆಯನ್ನು
ದಿನಾಂಕ 22.12.2020 ನೇ ಮಂಗಳವಾರ ಬೆಳಿಗ್ಗೆ 10-30 ಕ್ಕೆ ಕಾವಲಹಳ್ಳಿ ಗ್ರಾಮದ ನಮ್ಮ ಸ್ವಗೃಹದಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು

ಮೃತರ ಧರ್ಮಪತ್ನಿ ಶ್ರೀಮತಿ ಜಾನಮ್ಮ ಮತ್ತು ಮಕ್ಕಳು
ಶ್ರೀ ಕೆ.ರವೀಂದ್ರನಾಥ ಮತ್ತು ಸಹೋದರರು, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರು, ಕಾವಲಹಳ್ಳಿ
ಕಾವಲಹಳ್ಳಿ ನಿಂಗಪ್ಪ ಅಂಡ್ ಕೋ, ಎಪಿಎಂಸಿ ಯಾರ್ಡ್ 'ಬಿ' ಬ್ಲಾಕ್ ದಾವಣಗೆರೆ.
ಕಾವಲಹಳ್ಳಿ ಆಗ್ರೋ ಏಜೆನ್ಸೀಸ್, ನ್ಯೂ ಬಂಬೂಬಜಾರ್ ರಸ್ತೆ, ದಾವಣಗೆರೆ
ಕಾವಲಹಳ್ಳಿ ಆಟೋಮೊಬೈಲ್ಸ್, ಪಿ.ಬಿ. ರಸ್ತೆ, ದಾವಣಗೆರೆ.
ಕಾವಲಹಳ್ಳಿ ಸ್ಟೋನ್ ಕ್ರಷರ್, ಸತ್ತೂರು, ಹರಪನಹಳ್ಳಿ ತಾ॥
ಕಾವಲಹಳ್ಳಿ ಹಾರ್ಡ್‌ವೇರ್ಸ್, ಕೆ.ಆರ್. ರಸ್ತೆ, ವಿ.ಆರ್.ಎಲ್. ಹತ್ತಿರ, ದಾವಣಗೆರೆ.
ಕಾವಲಹಳ್ಳಿ ಫುಡ್ ಇಂಡಸ್ಟ್ರಿ, ಕಾವಲಹಳ್ಳಿ ಹರಪನಹಳ್ಳಿ ತಾ॥, ಬಳ್ಳಾರಿ ಜಿ॥
ಕಾವಲಹಳ್ಳಿ ಬ್ರಿಕ್ಸ್ ಇಂಡಸ್ಟ್ರೀಸ್, ಕಾವಲಹಳ್ಳಿ
ಹಾಗೂ ಕಡಕೊಳ್ಳದ ವಂಶಸ್ಥರು, ಕಾವಲಹಳ್ಳಿ ಮತ್ತು ಬಂಧು-ಮಿತ್ರರು.







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte